# ECHO OF HIS CALL

# ಕರೆಯ ಪ್ರತಿಧ್ವನಿ

KANNADA

ECHO OF HIS CALL 1969-2019 GOLDEN JUBILEE
REACHING NATIONS

**India's National Spiritual Newspaper**

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

**Editor : S. SAM SELVA RAJ** | **16 Languages** | **Associate Editor : Rev. R. Rama Krishna**

**Vol. XXV** | **DECEMBER 2023** | **No. 11**


## ಪರಿಶುದ್ಧ ಸತ್ಯವೇದ

ಈ ಕೆಳಗಿನ ವಚನಗಳನ್ನು ದಯಮಾಡಿ ಕಂಠ ಪಾಠ ಮಾಡಿರಿ.

**ಯೆಶಾಯ 9:1-6**

1. ಆದರೆ ಸಂಕಟಪಟ್ಟ ದೇಶಕ್ಕೆ ಅಂಧಕಾರವಿನ್ನಿಲ್ಲ. ಪೂರ್ವಕಾಲದಲ್ಲಿ ಜೆಬಲೋನ್ ಮತ್ತು ನಪ್ತಾಲಿ ಸೀಮೆಗಳನ್ನು ಆತನು ಅವಮಾನಕ್ಕೆ ಗುರಿ ಮಾಡಿದನು; ಅನಂತರದಲ್ಲಿ ಯೊರ್ದನಿನ ಆಚೆಯ ಸೀಮೆ, ಸಮುದ್ರದ ಕಡೆಗಿರುವ ಸೀಮೆ, ಅನ್ಯ ಜನಗಳಿರುವ ಗಲಿಲಾಯ ಸೀಮೆ ಈ ಪ್ರಾಂತವನ್ನೆಲ್ಲಾ ಘನಪಡಿಸಿದ್ದಾನೆ.
2. ಕತ್ತಲಲ್ಲಿ ಸಂಚರಿಸಿದ ಜನರಿಗೆ ದೊಡ್ಡ ಬೆಳಕು ಕಾಣಿಸಿತು; ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಪ್ರಕಾಶವು ಹೊಳೆಯಿತು.
3. ನೀನು ಪ್ರಜೆಗಳನ್ನು ವೃದ್ಧಿಗೊಳಿಸಿದ್ದಿ. ಸುಗ್ಗಿ ಕಾಲದಲ್ಲಿ ಜನರು ಹರ್ಷಿಸುವ ಹಾಗು ಕೊಳ್ಳೆಯನ್ನು ಹಂಚಿಕೊಳ್ಳುವವರು ಹೆಚ್ಚಳಪಡುವ ಹಾಗೂ ನಿನ್ನ ಮುಂದೆ ಆನಂದಿಸುತ್ತಾರೆ.
4. ಅವರಿಗೆ ಭಾರವಾದ ನೊಗವನ್ನೂ ಹೊಡೆದ ಕೋಲನ್ನೂ ಬಿಟ್ಟಿ ಹಿಡಿದವನ ದೊಣ್ಣೆಯನ್ನೂ ಮಿದ್ಯಾನಿನ ನಾಶದಿನದದಲ್ಲಿ ಮುರಿದುಬಿಟ್ಟಂತೆ ಮುರಿದುಬಿಟ್ಟೀದಿ.
5. ಯುದ್ಧದ ಗದ್ದಲದಲ್ಲಿ ತುಳಿದಾಡಿದವರೆಲ್ಲರ ಮೆಟ್ಟುಗಳೂ ರಕ್ತದಲ್ಲಿ ಹೊರಳಾಡಿಸಿದ ಉಡುಪುಗಳು ಅಗ್ನಿಗೆ ಅಹಾರವಾಗಿ ಸುಟ್ಟು ಹೋಗುವವು.
6. ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು. ಆಡಳಿತವು ಅವನ ಬಾಹುವಿನ ಮೇಲಿರುವದು. ಅದ್ಭುತ ಸ್ವರೂಪನು, ಆಲೋಚನಾ ಕರ್ತನು ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು.

# ರಾಜಕುಮಾರನ ಉಡುಗೊರೆ !

**- ಘನ. ಎಂಜಿಲಿನ್ ಸೆಲ್ವಕುಮಾರಿ**



ನನ್ನ ಬಾಲ್ಯದಿಂದಲೂ, ಕ್ರಿಸ್ತ ಜಯಂತಿಯು ಯಾವಾಗಲು ನನ್ನ ಹೃದಯದಲ್ಲಿ ವಿಶೇಷವಾದ ಸ್ಥಾನವನ್ನು ಹಿಡಿದಿದೆ.ಇದು ವಿವರಿಸಲಾಗದ ಸಂತೋಷವನ್ನು ತರುತ್ತದೆ. ನಾನು ಯೌವನಸ್ಥಳು ಆಗಿದ್ದಾಗ, ಉಡುಗೊರೆಗಳನ್ನು ಮತ್ತು ಹೊಸ ಬಟ್ಟೆಗಳನ್ನು ತೆಗೆದುಕೊಳ್ಳುವದಕ್ಕೆ ಮತ್ತು ನಮ್ಮ ಮನೆಯನ್ನು ಬಣ್ಣ ಬಣ್ಣದ ಕಾಗದಗಳಿಂದ ಮತ್ತು ದೀಪಗಳಿಂದ ಅಲಂಕಾರ ಮಾಡುವದಕ್ಕೆ ನಮ್ಮ ಹತ್ತಿರ ಬೇಕಾದಷ್ಟು ಹಣವಿರಲಿಲ್ಲ. ನಾವು ಸೀಮಿತ ಆಹಾರದೊಂದಿಗೆ ಒಂದು ಸಣ್ಣಮಲಗುವ ಕೋಣೆ ಮನೆಯಲ್ಲಿ ವಾಸಿಸುತ್ತಿದ್ದೆವು, ಆದರೆ ನನ್ನ ಪೋಷಕರು ಯಾವಾಗಲೂ ನಮ್ಮ ಬಾಲ್ಯವನ್ನು ಸುಂದರ ಮತ್ತು ಅರ್ಥಪೂರ್ಣವಾಗಿಸುವ ಮಾರ್ಗ ಗಳನ್ನು ಕಂಡುಕೊಂಡರು. ನಾನು ನನ್ನ ಸಹೋದರ ನಮ್ಮ ಪೋಷಕರಿಗೆ ಯಾವಾಗಲೂ ಚಿರಋಣಿ ಯಾಗಿರುತ್ತೇವೆ. ಅದು ಅದ್ಭುತವಾದ ಸಮಯ ವಾಗಿತ್ತು! ಅಜ್ಜಿ ತಾತಂದಿರರನ್ನು ಭೇಟಿ ಯಾಗುವುದು. ಚಿಕ್ಕಪ್ಪಗಳನ್ನು ಭೇಟಿ ಯಾಗುವುದು. ನಿದ್ದೆಮಬ್ಬಿನಲ್ಲಿ ಬೆಳಗಿನ ಜಾವದಲ್ಲಿ ದೇವಾಲಯಕ್ಕೆ ಹೋಗುವುದು. ರುಚಿಯಾದ ಊಟವನ್ನು ಉಣ್ಣುವದಕ್ಕೆ ಕುಟುಂಬದ ಎಲ್ಲಾ ಸದಸ್ಯರೊಂದಿಗೆ ಕೂತುಕೊಂಡು ಆತುರದಿಂದ ಕಾಯವುದು. ಆಟಗಳನ್ನು ಆಡುವುದು. ಸಾಂದರ್ಬಿಕ ಒಡಹುಟ್ಟಿದವರು ಕೂಡ ಜಗಳವಾಡುವುದು. ಈ ಎಲ್ಲಾ ಸಂಗತಿಗಳು ಆ ದಿನಗಳಲ್ಲಿ ನಿಜವಾಗಿಯೂ ಸುಂದರವಾಗಿಸಿದವು.

(3ನೇ ಪುಟಕ್ಕೆ)




**Echo of His Call**

*Christian YouTube Channel!*

**An opportunity to pray with Pr. S. Sam Selva Raj!**

Message & Prayer in 5 minutes!!


**English, Hindi, Tamil & Telugu**

Every day – From 2.00 A.M.

**Tamil Sunday Service – 8.30 A.M.**

# ECHO OF HIS CALL - (1969-2019 GOLDEN JUBILEE YEAR)

## *from your dearly beloved brother...*





**ನನ್ನ ಆತ್ಮವು ನಿನ್ನನ್ನು ಅಂಟಿಕೊಂಡು ಹಿಂಬಾಲಿಸಿರುವದು; ನಿನ್ನ ಬಲಗೈ ನನಗೆ ಆಧಾರವಾಗಿರುವದು (ಕೀರ್ತನೆ 63:8)**

**OUR MISSION POLICY**

We should expound and teach the contemporary generation the undiluted teachings of the ancient and early Apostles. It is the need of the hour.

HON. EDITOR-IN-CHIEF
Rev. Angeline S. Kumari, M.A., M.Sc., M.Ed.
MANAGING EDITOR
Pastor Alex Samson Sam, B.Th., M.Div.
GENERAL MANAGER
Bro. N. Prakasam, M.A., M.Sc.(C&P), PGDHRM., MBA.
ADMINISTRATION
Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)
EDITORIAL BOARD
Dr. Serena Bevin, M.A., M.Phil., B.Ed.
Sis. Sajini Cherian
Sis. L. Mariya Anjalin, M.A., M.Sc., B.Ed.
Rev. Dr. K.R. Rajasekaran
EDITOR, PUBLISHER & PRINTER
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858
95661 31858
E.MAIL ID
sam@echoofhiscall.org
biblecor@yahoo.co.in
WEBSITES
www.echoofhiscall.org
www.stpaulsmatriculation.com
YOUTUBE CHANNEL
Echo of His Call

ಕರ್ತನಲ್ಲಿ ನನ್ನ ಪ್ರೀತಿಯ ಸಹೋದರ ಮತ್ತು ಸಹೋದರಿಯರೇ!

ನಮ್ಮ ಕರ್ತನು ಮತ್ತು ರಕ್ಷಕನಾದ ಯೇಸುಕ್ರಿಸ್ತನ ವರ್ಣಿಸಲಾಗದ ನಾಮದಲ್ಲಿ ನಾವು ನಿಮಗೆ ಶುಭಾಶಯಗಳು ಕೋರುತ್ತೇವೆ. ನಾವು ನಿಮಗೆ ಸಂತೋಷದ ಕ್ರಿಸ್‌ಮಸ್ ಮತ್ತು ಆಶೀರ್ವದಿಸಲ್ಪಟ್ಟ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇವೆ.


### ಆತನ ಕರೆಯ ಪ್ರತಿಧ್ವನಿಯ ಪತ್ರಿಕೆ ಮತ್ತು ಯೂಟುಬ್ ಸೇವೆಗಳು.

ನಮ್ಮ ಪತ್ರಿಕಾ ಓದುಗರಿಂದ ನಾವು ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಸ್ವೀಕರಿಸಿ ನಾವು ಕರ್ತನಾದ ದೇವರಿಗೆ ಧನ್ಯವಾದಗಳನ್ನು ಹೇಳುತ್ತೇವೆ. ಆತನ ಕರೆಯ ಪ್ರತಿಧ್ವನಿ,ಮತ್ತು ನಮ್ಮ ಯೂಟುಬ್ ಚಾನೆಲ್‌ನ ವೀಕ್ಷಕರಿಗೆ ಕೂಡ. ಪ್ರತಿದಿನ ಬೆಳಿಗ್ಗೆ ಪ್ರಾರಂಭವಾಗುವ ಇಂಗ್ಲೀಷ್, ಹಿಂದಿ, ತಮಿಳು ಮತ್ತು ತೆಲುಗಿನಲ್ಲಿ ಪ್ರಸಾರವಾಗುವ ನಮ್ಮ ಯೂಟುಬ್ ಚಾನೆಲ್‌ನಲ್ಲಿ **5 ನಿಮಿಷದ ಸಂದೇಶವನ್ನು** ನೋಡುವದಕ್ಕೆ ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತವೆ. ಈ ಒಂದು ಉದ್ದೇಶಕ್ಕಾಗಿ ನಿಮ್ಮ ಮೋಬೈಲ್‌ನಲ್ಲಿ ನಮ್ಮ **+91-98410 71858** ರನ್ನು ಸೇವ್ ಮಾಡಿಕೊಳ್ಳಿರಿ. ನಮ್ಮ ಆತನ **ಕರೆಯ ಪ್ರತಿಧ್ವನಿಯ ಯೂಟುಬ್ ಚಾನೆಲ್**ಗೆ ಚಂದ ದಾರರಾಗಿರಿ ಎಂದು ನಾವು ನಿಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇವೆ. ಇದರ ಜೊತೆಗೆ, ನನ್ನ ನೇರವಾಗಿ ಸಂಪರ್ಕಿಸುವದಕ್ಕೆಈ ನಂಬರ್‌ನ್ನು +91-98412 71858 ದಯಮಾಡಿ ಸೇವ್ ಮಾಡಿ ಕೊಳ್ಳಿರಿ. ಈ ಆರಾಧನೆಗಳು ಸಂಪೂರ್ಣವಾಗಿ ಉಚಿತವಾಗಿವೆ.

### ಯೂತ್ ಕಿಡ್ ಕೇರ್‌ಗಾಗಿ ಗ್ಲೋಬಲ್ ವಿಷನ್

**ವಿಶ್ವಾದ್ಯಂತ ಯುವಕರು, ಹುಡುಗಿಯರು ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಒಂದು ನಿಮಿಷ ಪ್ರಾರ್ಥಿಸಲು** ನಾವು ಯುವಕರು ಮತ್ತು ಆರೈಕೆಗಾಗಿ ಜಾಗತಿಕ ದೃಷ್ಟಿ ಎಂಬ ಅಂದೋಲನವನ್ನು ಪ್ರಾರಂಭಿಸಿದ್ದೇವೆ. ಈ ಒಂದು ಸೇವೆಯಲ್ಲಿ ಪ್ರಪಂಚಾದ್ಯಂತಹ ಅನೇಕ ಸ್ನೇಹಿತರು ತಮ್ಮ ಹೆಸರುಗಳನ್ನು ನೋಂದಾಯಿಸಿ ಕೊಂಡಿದ್ದಾರೆ. **ನೋಂದಾಯಿಸಿದ ಪ್ರತಿಯೊಬ್ಬರು ಅವರು ವಾಸಿಸುವ ರಾಷ್ಟ್ರದ ಸಮಯದ ಪ್ರಕಾರ ಪ್ರತಿ ರಾತ್ರಿ 10 ಗಂಟೆಗೆ ಈ ಕೆಳಗಿನ ಪ್ರಾರ್ಥನೆ ಯನ್ನು ಪ್ರಾರ್ಥಿಸಲು ಪ್ರೋತ್ಸಾಹಿಸಲಾಗುತ್ತದೆ.**

**ಪ್ರೀತಿಯ ಕರ್ತನೆ, ನಮ್ಮ ಕರ್ತನು ಮತ್ತು ರಕ್ಷಕನಾದ ಯೇಸುಕ್ರಿಸ್ತನ ನಾಮದಲ್ಲಿ, ಪ್ರಪಂಚದ್ಯಾಂತಹ ಇರುವ ಪ್ರತಿ ಯೌವ್ವನಸ್ಥ ಹುಡುಗ, ಹುಡುಗಿ ಮತ್ತು ಮಗುವನ್ನು ಜ್ಞಾಪಕಮಾಡಿಕೊಳ್ಳುತ್ತೇವೆ. ಅಮೇನ್.**



***Youth and Kids with Lord Jesus Christ!***

ಈ ಪ್ರಾರ್ಥನೆಯ ಫಲಿತಾಂಶವು, ಅನೇಕ ಯೌವ್ವನಸ್ಥರು, ವಯಸ್ಕರು ಮತ್ತು ಮಕ್ಕಳು ನಮ್ಮ ಕರ್ತನಾದ ಯೇಸುಕ್ರಿಸ್ತನ ಸಾಕ್ಷಿಗಳಾಗಿ ಹೊರ ಹೊಮ್ಮುತ್ತಿದ್ದಾರೆ. ಎಲ್ಲಾ ಮಹಿಮೆ ಮತ್ತು ಘನತೆಯು ನಮ್ಮ ಕರ್ತನಾದ ಯೇಸುಕ್ರಿಸ್ತನಿಗೆ ಮಾತ್ರ ಸಲ್ಲಲಿ. ಅಮೇನ್. ನೀವು ನಿಮ್ಮ ಮಕ್ಕಳ ಹೆಸರಗಳನ್ನು ಕೊಡುವದಾದರೆ, ಅವರನ್ನು ಕೂಡ ನಮ್ಮ ಪ್ರಾರ್ಥನೆಯಲ್ಲಿ ಸೇರಿಸಿಕೊಳ್ಳುತ್ತೇವೆ. ಈ ಉದ್ದೇಶಕ್ಕಾಗಿ ಯವುದೇ ಹಣಕಾಸಿನ ಕೊಡುಗೆಗಳನ್ನು ಕಳುಹಿಸುವುದರಿಂದ ದೂರವಿರಿ.

Our Ministries: ECHO OF HIS CALL Monthly Magazines (16 languages) BIBLECOR - Postal Courses (3 languages) YouTube Ministry Online Courses Theological Correspondence Courses (2 languages) Church Planting Nehemiah Bible Colleges Gospel Printing Press Great Commission Partners St. Paul's Matriculation School Crusades Community Development

ನಮ್ಮ ಸೇವೆಯ ಮೂಂಚೂಣಿಯಲ್ಲಿ ಸೇವೆ ಸಲ್ಲಿಸುತ್ತಿರುವ ನಮ್ಮ ಅನೇಕ ಸಮರ್ಪಿತ ಸಹೋದ್ಯೋಗಿಗಳು ವಿವಿಧ ಕಾಯಿಲೆಗಳಿಂದ ಬಳಲುತ್ತಿದ್ದಾರೆ ಮತ್ತು ಗಮನಾರ್ಹ ನಷ್ಟವನ್ನು ಅನುಭವಿಸಿದ್ದಾರೆ. ನಾವು ದೀನತೆಯಿಂದ ಅವರ ಒಳಿತಿಗಾಗಿ, ಸಂರಕ್ಷಣೆ, ನಮ್ಮ ದೇವರ ಸೇವ ಕರಗಳ ಎಲ್ಲಾ ಕುಟುಂಬಗಳ ಸನ್ನಿವೇಶಗಳಿಗಾಗಿ ಪ್ರಾರ್ಥನೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ನಮ್ಮ ಹೊಸವರ್ಷದ ಆರಾಧನೆಯು ನಮ್ಮ ಯೂಟುಬ್‌ನಲ್ಲಿ ಡಿಸೆಂಬರ್ 31, ರಾತ್ರಿ 10 ಗಂಟೆಗೆ ಪ್ರಸಾರವಾಗುತ್ತದೆ. ನಿಮ್ಮ ಅನುಕೂಲಕ್ಕೆ ತಕ್ಕಂತೆ ನೀವು ಇದನ್ನು ನೋಡಬಹುದು. ನೀವು ನಿಮ್ಮ ಸ್ಥಾನಿಕ ಸಭೆಯ ಆರಾಧನೆಗೆ ಹೋಗದೆ ಇರಬಾರದೆಂದು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ನಿಮ್ಮ ಸಭೆಗೆ ಹಾಜರಾಗುವುದು ಬಹಳ ಪ್ರಾಮುಖ್ಯವಾದದ್ದು. ಹೊಸ ವರ್ಷದ ಆಶೀರ್ವಾದಕ್ಕಾಗಿ ವಿಶೇಷ ಪ್ರಾರ್ಥನಾ ಅವಧಿಗಳನ್ನು ಪ್ರತಿದಿನ ಬೆಳಿಗ್ಗೆ 6 ಗಂಟೆಗೆ ಜನವರಿ 2, 2024 ರಿಂದ ಜನವರಿ 07, 2024 ರವರೆಗೆ ನಡೆಸಲಾಗುತ್ತದೆ.

ನಾವು ಆತನ ಕರೆಯ ಪ್ರತಿಧ್ವನಿಯ ಪತ್ರಿಕೆಯನ್ನು ಪೋಸ್ಟ್ ಮುಖಾಂತರ ಕಳುಹಿಸುತ್ತೇವೆ. ಅದ್ಯಾಗೂ, ಅನೇಕರು ನಿಮ್ಮಲ್ಲಿ ಸ್ವೀಕರಿಸು ತ್ತಿಲ್ಲವೆಂದು ನಮಗೆ ಗೊತ್ತಿದೆ. ನೀವು ಪಡೆದು ಕೊಳ್ಳುವದನ್ನು ಗೊತ್ತು ಮಾಡುವದಕ್ಕೆ, ದಯಮಾಡಿ ನಿಮ್ಮ ವ್ಯಾಟ್ಸ್ಪ್ ನಂಬರ್ ಮತ್ತು ಇಮೇಲ್ ವಿಳಾಸವನ್ನು ಸುರಕ್ಷತೆಗಾಗಿ ನಮ್ಮೊಂದಿಗೆ ಹಂಚಿಕೊಳ್ಳಿರಿ. ಡಿಸೆಂಬರ್ ತಿಂಗಳಲ್ಲಿ ಅನೇಕ ಸೇವೆಗಳನ್ನು ನಾವು ಅಯೋಜಿಸಿದ್ದೇವೆ, ಯಾವುದೇ ಅಡೆತಡೆಯಿಲ್ಲದೆ ಸಫಲವಾಗಿ ಆಗುವಂತೆ ನೀವು ಪ್ರಾರ್ಥನೆ ಮಾಡಬೇಕೆಂದು ಆಸಕ್ತಿಯಿಂದ ಬೇಡಿಕೊಳ್ಳುತ್ತೇವೆ.

ಸಂತೋಷದ ಕ್ರಿಸ್‌ಮಸ್ ಶುಭಾಶಯಗಳು ಮತ್ತು ನಿಮ್ಮೆಲ್ಲರಿಗೆ ಆಶೀರ್ವದಿಸಲ್ಪಟ್ಟ ಹೊಸವರ್ಷದ ಶುಭಾಶಯಗಳು!

**ಕ್ರಿಸ್ತಯೇಸುವಿವಲ್ಲಿ ನಿಮ್ಮ ಸೇವಕರುಗಳು,**
**ಪಾ. ಎಸ್. ಸ್ಯಾಮ್ ಸೆಲ್ವರಾಜ್ ಮತ್ತು**
**ಅಲೆಕ್ಷೆ ಸ್ಯಾಮುಸನ್ ಸ್ಯಾಮ್**
**(+91) 98412 71858 / 98410 71858**
**E.mail : samselvaraj333@gmail.com**

*(1ನೇ ಪುಟದಿಂದ)*

ಈಗಲೂ ಕೂಡ, ಪ್ರತಿವರ್ಷ, ಪರಿಮಳದ ಮೇಣದ ಬತ್ತಿಗಳು, ಸುವಾಸನೆಯ ಸಿಹಿತಿಂಡಿ ಗಳು, ಕಣ್ಣುಮಿಟಿಕಿಸುವ ಶೃಂಗಾರದ ದೀಪದಗಳು, ತಂಪಾದ ಗಾಳಿಯು, ಇದರ ಹೃದಯ ಸ್ಪರ್ಷದ ಕ್ಯಾಂರಲ್ಸ್, ದೊಡ್ಡ ಜ್ಞಾಪಕಗಳನ್ನು ಮರು ಜ್ಞಾಪಿಸುವುದು.

ಏನೇ ಹಾಗಲಿ, ಕೆಲವರಿಗೆ ಕ್ರಿಸ್ತಜಯಂತಿಯು ವ್ಯತ್ಯಾಸವಾದ ಅನುಭವವಾಗಿದೆ, ಇದು ಒತ್ತಡದ ಸಮಯವಾಗಿರಬಹುದು ಅದು ನಮ್ಮೊಂದಿಗೆ ಇನ್ನು ಮುಂದೆ ಇಲ್ಲದ ಪ್ರೀತಿಪಾತ್ರರ ನೆನಪುಗಳನ್ನು ಮರಳಿ ತರುತ್ತದೆ. ಇತರರು ಆರೋಗ್ಯ ಸಮಸ್ಯೆಗಳು ಅಥವಾ ಹಣಕಾಸಿನ ನಿರ್ಬಂಧಗಳೊಂದಿಗೆ ಹೋರಾಡುತ್ತಿರಬಹುದು. ಕೆಲವು ಜನರು ಕ್ರಿಸ್ತಜಯಂತಿಯ ಸಡಗರ ಮತ್ತು ಗದ್ದಲವನ್ನು ಅಗಾಧವಾಗಿ ಕಾಣಬಹುದು, ಇದು ಒಂಟಿತನ, ದುಃಖ ಅಥವಾ ಖಿನ್ನತೆಯ ಭಾವನೆಗಳಿಗೆ ಕಾರಣವಾಗುತ್ತದೆ. ಈ ಸಂದರ್ಭದಲ್ಲಿ ಕೂಡ ಆತ್ಮಹತ್ಯೆಗಳ ಸಂಖ್ಯೆಯು ಹೆಚ್ಚಾಗುತ್ತದೆ ಎಂದು ಹೇಳಲಾಗುತ್ತದೆ.

ಇದರ ಜೊತೆಗೆ, ಕ್ರಿಸ್ತಜಯಂತಿಯನ್ನು ಡಿಸೆಂಬರ್ 25ರಂದು ಆಚರಿಸಬೇಕೇ ಮತ್ತು ಅದು ಯೇಸುವಿನ ನಿಜವಾದ ಜನ್ಮದಿನವೇ ಎಂಬುದರ ಬಗ್ಗೆ ನಿರಂತರ ಚರ್ಚೆ ನಡೆಯುತ್ತಾ ಇದೆ. ನನಗೆ ವಿಶೇಷವಾದ ದಿನವು ಮುಖ್ಯವಲ್ಲ. ಯೇಸುಕ್ರಿಸ್ತನು ಈ ಲೋಕಕ್ಕೆ ಬಂದಿರುವ ಸತ್ಯವು ನನಗೆ ಪ್ರಾಮುಖ್ಯವಾಗಿದೆ. ಇದು ಅಲುಗಾಡದ ಸತ್ಯವಾಗಿದೆ. ದೇವಕುಮಾರನು ಮನುಷ್ಯಕುಮಾರನಾದನು. ಇದು ನಿಜವಾಗಿಯೂ ಮುಖ್ಯವಾದುದು.

ಆದ್ದರಿಂದ, ನಾನು ಯೇಸುವಿನ ಜನನವನ್ನು ಸ್ವೀಕರಿಸಿದ ಶ್ರೇಷ್ಠ ಉಡುಗೊರೆಯನ್ನು ಜಗತ್ತಿಗೆ ಘೋಷಿಸಲು ನಾನು ಈ ಅವಕಾಶವನ್ನು ಬಳಸುತ್ತೇನೆ. ನನ್ನ ಜೀವನದ ಸಂದರ್ಭಗಳನ್ನು ಲೆಕ್ಕಿಸದೆ, ನನ್ನ ಕುಟುಂಬ ಮತ್ತು ಸ್ನೇಹಿತರೊಂದಿಗೆ ಈ ಘಟನೆಯನ್ನು ಆಚರಿಸಲು ನಾನು ಇಷ್ಟ ಪಡುತ್ತೇನೆ. ನಾನು ಕುಟುಂಬಗಳನ್ನು ಹೊಂದಿರದ ಅಥವಾ ಕಷ್ಟದ ಸಮಯದಲ್ಲಿ ಹೋಗುತ್ತಿರು ವವರನ್ನು ಸೇರಿಸಲು ಪ್ರಯತ್ನಿಸುತ್ತೇನೆ. ಇದು ಪ್ರೀತಿ, ಕಾಳಜಿಯನ್ನು ತೋರಿಸುವ ಸಮಯ ಮತ್ತು ನನ್ನಲ್ಲಿರುವುದನ್ನು ಇತರರೊಂದಿಗೆ ಹಂಚಿ ಕೊಳ್ಳುವುದು.

ಕ್ರಿಸ್ತಜಯಂತಿಯು ಒಂದು ಅಂಶವು ತುಂಬಾ ಸಾಮನ್ಯವೆಂದು ತೋರುತ್ತದೆ, ಅದು ಸಾಮನ್ಯವಾಗಿ ಉಡುಗೊರೆಗಳನ್ನು ನೀಡುವ ಮತ್ತು ಸ್ವೀಕರಿಸುವುದರೊಂದಿಗೆ ಸಂಬಂಧಿಸಿದೆ. ನಾವು ನಮ್ಮ ಮಕ್ಕಳಿಗೆ ಹೊಸ ಬಟ್ಟೆಗಳನ್ನು ಖರೀದಿಸುತ್ತೇವೆ ಮತ್ತು ನಮ್ಮ ಪ್ರೀತಿಪಾತ್ರರಿಗೆ ನಾವು ಅವರನ್ನು ಪ್ರೀತಿಸುತ್ತೇವೆ, ಅವರ ಬಗ್ಗೆ ಕಾಳಜಿ ವಹಿಸುತ್ತೇವೆ ಮತ್ತು ಅವರೊಂದಿಗೆ ನಮ್ಮ ಸಂತೋಷವನ್ನು ಹಂಚಿಕೊಳ್ಳಲು ಬಯಸುತ್ತೇವೆ ಎಂದು ತೋರಿಸಲು ವಿಶೇಷವಾದದ್ದನ್ನು ಖರೀದಿಸುತ್ತೇವೆ. ಪಾಶ್ಚಮತ್ಯ ರಾಷ್ಟ್ರಗಳಲ್ಲಿ ಆಗಸ್ಟ್ ಪ್ರಾರಂಭದಲ್ಲಿ ಕ್ರಿಸ್ತ ಜಯಂತಿಯ ಉಡುಗೊರೆ ಗಳನ್ನು ತೆಗೆದು ಕೊಳ್ಳುವದಕ್ಕೆ ಜನರು ಆರಂಭಿಸಿದ್ದಾರೆ. ಉಡುಗೊರೆಗಳನ್ನು ನೀಡುವುದು ಅನೇಕ ದೇಶಗಳಲ್ಲಿ ಒಂದು ಪ್ರಮುಖ ಕ್ರಿಸ್ತ ಜಯಂತಿಯು ಸಂಪ್ರದಾಯವಾಗಿದೆ, ಕೆಲವೊಮ್ಮೆ ಜನರು ಈಗಾಗಲೇ ಮನುಕುಲಕ್ಕೆ ನೀಡಿದ ಮಹಾನ್ ಉಡುಗೊರೆಯನ್ನು ಆಚರಿಸಲು ಮರೆಯುತ್ತಾರೆ- ಯೇಸುವಿನ ಜನ್ಮ.

**ಯೇಸುಕ್ರಿಸ್ತನ ಜನನವು 5 ಪ್ರಾಮುಖ್ಯ ಉಡುಗೊರೆ ಗಳನ್ನು ನಮಗೆ ಪ್ರಸ್ತುತಪಡಿಸುತ್ತದೆ :**

## 1. ಈಡೇರಿದ ವಾಗ್ದಾನದ ಉಡುಗೊರೆ!

ಯೇಸುಕ್ರಿಸ್ತನ ಜನನವು ನಮ್ಮ ದೇವರು ವಾಗ್ದಾವನ್ನು ನೆರವೇರಿಸುವನು ಎಂಬುವುದನ್ನು ನಮಗೆ ಜ್ಞಾಪಕಪಡಿಸುತ್ತದೆ. ಆತನು ಹೇಳಿದ್ದನ್ನು ಮಾಡುವನು. ಆತನು ಮನುಷ್ಯನ ಹಾಗೆ ಸುಳ್ಳನ್ನು ಹೇಳುವವನಲ್ಲ ಅಥವಾ ಮನಸ್ಸನ್ನು ಬದಲಾವಣೆ ಯನ್ನು ಮಾಡುವುದಿಲ್ಲ. ಇದು ಕೆಲವೊಮ್ಮೆ ಕೆಲವು ತಲೆಮಾರುಗಳ ಸಮಯ ತೆಗೆದುಕೊಳ್ಳಬಹುದು ಆದರೆ ಆತನ ವಾಗ್ದಾನವು ಯಾವಾಗಲೂ ನಿಂತಿದೆ. **ಸತ್ಯವೇದವು ಹೇಳುತ್ತದೆ ಭೂಮ್ಯಾಕಾಶಗಳು ಆಳಿದುಹೋಗುವವು, ಆದರೆ ನನ್ನ ಮಾತುಗಳು ಆಳಿದು ಹೋಗುವದೇ ಇಲ್ಲ** (ಮತ್ತಾಯ 24:35). ಏನೇ ಹಾಗಲಿ, ಕೆಲವು ವಾರಗಳ, ತಿಂಗಳುಗಳ, ಅಥವಾ ವರ್ಷಗಳ ನಂತರ ಬಿಟ್ಟುಕೊಡುತ್ತೇವೆ. ದೇವರು ಹೇಳಿದಾಗ ಆತನು ಮಾಡುವು ದೆಂಬುದನ್ನು ಒಂದು ವಿಷಯುವನ್ನು ನಾವು ಜ್ಞಾಪಕ ವಿಟ್ಟುಕೊಳ್ಳಬೇಕು. ಇದು ನಮ್ಮ ಜೀವಮಾನದಲ್ಲಿ ಆಗಬಹುದು ಅಥವಾ ನಮ್ಮ ಮಕ್ಕಳ ಸಮಯದಲ್ಲಿ



*For unto us a Child is born!*

ಕೂಡ ಆಗಬಹುದು. ಯೆಹೂದ್ಯ ಜನರಿಗೆ ಮೆಸ್ಸಿಯನ ವಾಗ್ದಾನವನ್ನು ದೇವರು ಮಾಡಿದನು. ಆತನು ಮಾಡಿ ಒಬ್ಬರನ್ನು ಕಳುಹಿಸಿದನು!

ಸುಮಾರು 44 ಹಳೆ ಒಡಂಬಡಿಕೆಯ ವಾಗ್ದಾನಗಳು ಯೇಸುಕ್ರಿಸ್ತನಲ್ಲಿ ನೇರವೇರಿವೆ ಎಂದು **ಸತ್ಯವೇದದ ವಿದ್ವಾಂಸರು** ಹೇಳುತ್ತಾರೆ. ಉದಾಹರಣೆ, ಆದಿಕಾಂಡ 3:5 ಮೆಸ್ಸಿಯನು ಸ್ತ್ರೀಯ ಗರ್ಭದಲ್ಲಿ ಹುಟ್ಟುವನು ಎಂಬ ಪ್ರವಾದನೆಯು ಮತ್ತಾಯ 1:20 ರಲ್ಲಿ ನೆರವೇರಿತು. ಆತನು ಹುಟ್ಟುವ ಸ್ಥಳದ ಇನ್ನೊಂದು ಪ್ರವಾದನೆಯು ನೇರವೇರಿತು (ಮೀಕ 5:2, ಮತ್ತಾಯ 2:1). ಇನ್ನೂ ಹಲವು ಪ್ರವಾದನೆ ಗಳು ನೇರವೇರಿದನ್ನು ನಾನು ಅವೆಲ್ಲವನ್ನೂ ಪಟ್ಟಿ ಮಾಡಬಲ್ಲೆ. ಆದರೆ ಪ್ರಾಮುಖ್ಯವಾದ ವಿಷಯ ವೇನೆಂದರೆ ನೆರವೇರಿದ ಈ ವಾಗ್ದಾನಗಳನ್ನು ನೋಡುವುದಕ್ಕೆ ದೇವರ ಮಕ್ಕಳು ವರ್ಷಗಟ್ಟಲೆ ಕಾಯಬೇಕಾಯಿತು.

ಪ್ರೀತಿಯ ದೇವರ ಮಕ್ಕಳೇ, ದೇವರ ನಿಮಗೆ ಏನಾದರೂ ವಾಗ್ದಾನವನ್ನು ಮಾಡಿದ್ದರೆ, ನಿರಂತರ ವಾಗಿ ನಂಬಿಕೆಯಿಂದ ಪ್ರಾರ್ಥನೆ ಮಾಡಿರಿ. ಬಿಟ್ಟುಕೊಡಬೇಡಿರಿ. ನೀವು ಮಳೆಯನ್ನು ಅಥವಾ ಗಾಳಿಯನ್ನು ನೋಡದೇ ಇರಬಹುದು. ಆದರೆ ನಿಮ್ಮ ಕಂದಕಗಳು ನೀರಿನಿಂದ ತುಂಬಿರುತ್ತೇವೆ. ಯೇಸುಸ್ವಾಮಿಯು ಹೌದು ಎಂದು ಹೇಳುವಾಗ, ಯಾರಿಗೂ ಇಲ್ಲ ಎಂದು ಹೇಳುವದಕ್ಕೆ ಆಗುವುದಿಲ್ಲ! ಆತನು ವಾಗ್ದಾವನ್ನು ಪೂರೈಸುವನು! ನಿಮ್ಮ ನಂಬಿಕೆಯನ್ನು ಗಟ್ಟಿಯಾಗಿ ಇಡಿದುಕೊಳ್ಳಿ. ಇನ್ನೂ ಯಾವುದನ್ನು ಹಿಡಿದುಕೊಳ್ಳದೇ ಇರುವಾಗ. ದೇವರು ಹೇಳಿದ್ದನ್ನು, ಆತನು ನೆರವೇರಿಸುವನು.

ನಾವು ಅದನ್ನು ಇನ್ನೂ ನೋಡದಿದ್ದರೂ ಸಹ ಕ್ರಿಸ್ತ ಜಯಂತಿ ನೆನಪಿಡುವ ಸಮಯ. ನಮ್ಮ ಪರವಾಗಿ ದೇವರು ಕಾರ್ಯವನ್ನು ಮಾಡುತ್ತಾನೆ.

ಎಲ್ಲಾ ವಿಷಯಗಳು ಸುಂದರವಾಗಿ ಆತನ ಸಮಯದಲ್ಲಿ ಮಾಡಲ್ಪಟ್ಟಿವೆ. ಆತನ ಸಮಯಕ್ಕಾಗಿ ಕಾಯಿರಿ! ಆತನ ಸಮಯವು ಪರಿಪೂರ್ಣವಾಗಿದೆ! ಎಲ್ಲಾ ವಿಷಯಗಳು ಸಾಧ್ಯವಾಗಿವೆ. ಹನ್ನ, ಸಿಮೋಯೋನ್, ಮರಿಯಳು, ಎಲಿಜಬತ್ ಹಾಗೆ ನಿರಂತರವಾಗಿ ಕಾಯಿದು ನಿಮ್ಮನ್ನು ಒಪ್ಪಿಸಿಕೊಡಿರಿ. ಅವರು ಕಾಯಿದು ಮತ್ತು ದೇವರ ವಾಗ್ದಾನವು ನೆರವೇರುವುದನ್ನು ನೋಡಿದರು.

## 2. ಶಾಂತಿಯ ಉಡುಗೊರೆ!

ದೇವರಿಂದ ಎರಡನೆಯ ಅತ್ಯಂತ ದೊಡ್ಡದಾದ ಉಡುಗೊರೆಯು ಶಾಂತಿಯನ್ನು ಅತನು ಕೊಡುತ್ತಾನೆ. ಆತನ ಹೆಸರು ಸಮಾಧಾನದ ಪ್ರಭುವಾಗಿದ್ದಾನೆ! ಶಾಂತಿಯು ನಮ್ಮ ಜೀವಿತದಲ್ಲಿ ಬಹಳ ಪ್ರಾಮುಖ್ಯವಾದ ವಿಷಯವಾಗಿದೆ. ಅದನ್ನು ಗುರುತಿಸುವದಕ್ಕೆ ಅಥವಾ ಪಡೆದುಕೊಳ್ಳದೆ ಆಗದೆ ಇದ್ಯಾಗ್ಯೂ. ಶಾಂತಿ ಇಲ್ಲದೆ, ಏನೂ ಅರ್ಥವಿಲ್ಲ. ನಮಗೆ ದೊಡ್ಡ ಮನೆಗಳು ಇರಬಹುದು. ಬೆಲೆಬಾಳುವ ಕಾರು ಇರಬಹುದು.ಒಳ್ಳೆಯ ಸಂಬಳ ಇರಬಹುದು. ಪೋಷಕರಿಂದ ಟ್ರೋಫಿ, ಶ್ರೀಮಂತ ಗಂಡ, ತಲಾಂತುಗಳ ಮಕ್ಕಳು, ಒಂದು ವೇಳೆ ನಮಗೆ ಶಾಂತಿ ಇಲ್ಲದೆ ಹೋದರೆ, ನಾವು ಹೊಂದಿರುವ ಎಲ್ಲವುಗಳಲ್ಲಿ ಯಾವುದೇ ಪ್ರಯೋಜನವಿಲ್ಲ.

ನಾನು ಒಮ್ಮೆ ಒಬ್ಬ ಯುವಕನನ್ನು ಭೇಟಿಯಾದೆ, ಅವನು ನನಗೆ ಹೇಳಿದಾಗ ನನ್ನ ಮನಸ್ಸನ್ನು ಸ್ಫೋಟಿಸಿದನು, ನಾನು ಚಿಕ್ಕಮನೆಯಲ್ಲಿ ವಾಸಿಸುವದಕ್ಕಿಂತ ದೊಡ್ಡಮನೆಯಲ್ಲಿ ಆಳುತ್ತಾ ಬದುಕಲು ಬಯಸುತ್ತೇನೆ. ಪ್ರಾಮಾಣಿಕವಾಗಿ, ನನ್ನ ಹೃದಯವು ಅತನ ಬಳಿಗೆ ಹೋಯಿತು! ಇಂತಹ ಸಮಾಜದಲ್ಲಿ ನಾವು ಜೀವಿಸುತ್ತಾ ಇದ್ದೇವೆ. ನಾವು ಜನರನ್ನು ಪ್ರಭಾವಗೊಳಿಸುವದಕ್ಕೆ ಜೀವಿಸುತ್ತಾ ಇದ್ದೇವೆ. ನಮ್ಮ ಬಾಹ್ಯ ಸಂಪತ್ತಿನಿಂದ ಅಳೆಯಲಾಗುತ್ತದೆ, ಇತರರು ನಮ್ಮನ್ನು ಯಶಸ್ವಿ ಮತ್ತು ಶಕ್ತಿ ಶಾಲಿ ಎಂದು ನೋಡಬೇಕೆಂದು ನಾವು ಬಯಸುತ್ತೇವೆ. ಆದರೆ ಆಂತರಿಕ ಸಂಪತ್ತು-ಶಾಂತಿ.

ಎಲ್ಲಾ ಸನ್ನಿವೇಶಗಳಿಗೆ ಸಾಕಾಗುವ ಶಾಂತಿಯನ್ನು ಕೊಡುತ್ತೇನೆಂದು ಯೇಸುಸ್ವಾಮಿಯು ಹೇಳಿದನು. ನಿಮ್ಮಲ್ಲಿ 10 ಸಂಖ್ಯೆಯ ಬ್ಯಾಂಕ್ ಮೊತ್ತ ಇರಬಹುದು ಅಥವಾ ಒಂದೇ ಸಂಖ್ಯೆಯ ಮೊತ್ತ ಇರಬಹುದು. ನಿಮಗೆ ಕುಟುಂಬ ಇರಬಹುದು ಅಥವಾ ನೀವು ಏಕಾಂಗಿಯಾಗಿ ಇರಬಹುದು. ನೀವು ಅರೋಗ್ಯವಂತರಾಗಿರ ಬಹುದು ಅಥವಾ ನಿಮ್ಮ ಅದೃಷ್ಟವನ್ನು ವೈದ್ಯರ ಮತ್ತು ಔಷಧಿಗಳ ಮೇಲೆ ಖರ್ಚುಮಾಡುತ್ತಿರಬಹುದು. ನೀವು ಪುರುಷ ಅಥವಾ ಮಹಿಳೆಯಾಗಿರಬಹುದು. ಯೌವ್ವನಸ್ಥ ಅಥವಾ ಹಿರಿಯ ಇದು ವಿಷಯವಲ್ಲ. **ಎಲೈ ಕಷ್ಟ ಪಡುವವರೇ, ಹೊರೆಹೊತ್ತವರೇ, ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿಯನ್ನು ಕೊಡುತ್ತೇನೆಂದು ಯೇಸುಸ್ವಾಮಿಯು ಹೇಳಿದ್ದಾನೆ** (ಮತ್ತಾಯ 11:28). **ಲೋಕವು ಕೊಡುವ ರೀತಿಯಲ್ಲಿ ನಾನು ನಿಮಗೆ ಶಾಂತಿಯನ್ನು ಕೊಡುವುದಿಲ್ಲ** (ಯೋಹಾನ 14:27). ನಮ್ಮ ಆಲೋಚನೆ, ಯೋಚಿಸು ವದಕ್ಕಿಂತಲೂ ಮೀರಿ ದೇವರು ಶಾಂತಿಯನ್ನು ಕೊಡುತ್ತಾನೆ. ಇದು ಘರ್ಜಿಸುವ ಸಿಂಹಗಳ ಮಧ್ಯೆ ದಾನಿಯೇಲ್ ಅನುಭವಿಸಿದ ಶಾಂತಿ, ಇದು ಇಬ್ರಿಯ ಸಹೋದರರು ಉರಿಯುತ್ತಿರುವ ಬೆಂಕಿಯ ಮಧ್ಯದಲ್ಲಿ ಅನುಭವಿಸಿದ ಶಾಂತಿಯಾಗಿದೆ.

ಯೇಸುಕ್ರಿಸ್ತನು ಕೊಡುವ ಶಾಂತಿಗೆ ಯಾವುದೇ ಮಿತಿಯಿಲ್ಲ. ಬಿರುಗಾಳಿಯ ಮಧ್ಯದಲ್ಲಿ ಕೂಡ ಆತನ ಶಾಂತಿಯನ್ನು ನೀವು ಅನುಭವಿಸಬಹುದು. ಕಾರಣ ಅತನು ಎಲ್ಲಾ ಸನ್ನಿವೇಶಗಳನ್ನು ಹತೋಟಿಯಲ್ಲಿ ಇಟ್ಟುಕೊಂಡಿದ್ದಾನೆ. ದೇವರ ಜ್ಞಾನವಿಲ್ಲದೆ, ನಮ್ಮನ್ನು ಯಾವುದೇ ಮುಟ್ಟುವುದಿಲ್ಲ. ಈ ಒಂದು ಭರವಸೆಯು ನಮಗೆ ಇರಬೇಕಾಗಿದೆ. ಆತನು ನಮ್ಮನ್ನು ನಿರಾಶೆಗೊಳಿಸುವುದಿಲ್ಲ.

*(6ನೇ ಪುಟಕ್ಕೆ)*

**RESIDENTIAL BIBLE COURSE**
**NEHEMIAH BIBLE COLLEGE, Chennai.**

Medium : Hindi

*Registered Candidate for Membership*
Asia Theological Association (ATA)

Recognised by International Christian Leaders &
Senior Pastors for the past 54 years

*Certificate in Ministry*
*Diploma in Theology*

Qualification : 10th Standard & above

**Rush for admission!**

**Contact : The Chairman, Nehemiah Bible College.**
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

✶ ONLINE CLASSES ARE AVAILABLE ✶

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು



ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13 )
ತ್ವರಿತಗೊಳಿಸುವುದು ( II ತಿಮೋಥಿ. 1:6 )

**PRAISE & PRAYER POINTS - From 2023 December 19 To January 18**

(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)

## ಸ್ತೋತ್ರಕ್ಕಾಗಿ ಅಂಶಗಳು

| | |
|---|---|
| ಡಿಸೆಂಬರ್ 19 : | ನಮ್ಮ ಸಂತ ಪೌಲ ಮೆಟ್ರಿಕೇಲ್ಯುಷನ್ ಶಾಲೆ, ನೆಹಮೀಯ ಸತ್ಯವೇದ ಕಾಲೇಜು, ದೈವಶಾಸ್ತ್ರ ಅಂಚೆ ಕೋರ್ಸುಗಳು ಇವೆಲ್ಲಗಳು ಅಗತ್ಯ ಇರುವ ಜನರಿಗೆ ಸೇವೆ ಮಾಡುವವರು. |
| ಡಿಸೆಂಬರ್ 20 : | ನಮ್ಮ ಭಾಷಾಂತಕರರು, ಸಹ ಸಂಪದಾಕರು, ಸಂಯೋಜಕರು, ಅವರ ಕುಟುಂಬಗಳ ಮೇಲೆ ಆತನ ಆಶೀರ್ವಾದಕ್ಕಾಗಿ. |
| ಡಿಸೆಂಬರ್ 21 : | ಸೇವಾ ಕ್ಷೇತ್ರದಲ್ಲಿರುವ ಸೇವಕರುಗಳು ದೊಡ್ಡ ಸಮರ್ಪಣೆಗಾಗಿ. |
| ಡಿಸೆಂಬರ್ 22 : | ನಮ್ಮ ಸಮರ್ಪಿತ ಕೆಲಸಗಾರರ ಕುಟುಂಬಗಳ ಮೇಲೆ ಆಶೀರ್ವಾದಗಳನ್ನು ಸುರಿಸಿದ್ದಕ್ಕಾಗಿ. |
| ಡಿಸೆಂಬರ್ 23 : | ನಮ್ಮ ಹಿರಿಯ ಸಭಾಪಾಲಕರ ಮತ್ತು ಅವರ ಕುಟುಂಬದ ಸದಸ್ಯರನ್ನು ಸಂರಕ್ಷಣೆ ಮಾಡಿ ಎಲ್ಲಾ ಕೆಟ್ಟ ಸನ್ನಿವೇಶಗಳಿಂದ ತಪ್ಪಿಸಿದಕ್ಕಾಗಿ. |
| ಡಿಸೆಂಬರ್ 24 : | ನಮ್ಮ ನೆಹಮೀಯ ಸತ್ಯವೇದದ ಕಾಲೇಜಿನ ಎರಡನೆಯ ಹಂತವನ್ನು ಸಫಲವಾಗಿ ಮುಗಿಸಿದ್ದಕ್ಕಾಗಿ. |
| ಡಿಸೆಂಬರ್ 25 : | ಈ ವರ್ಷವಿಡೀ ನಡೆಯುವ ಕ್ರೀಸ್ತೀಯ ಸಂಭ್ರಮಾಚರಣೆಯ ಮೇಲೆ ದೇವರ ಆಶೀರ್ವಾದಕ್ಕಾಗಿ. |
| ಡಿಸೆಂಬರ್ 26 : | 16 ಭಾಷೆಗಳಲ್ಲಿ ನಮ್ಮ ಎಲ್ಲಾ ಪ್ರಕಟಣೆಗಳಿಗೆ ನೋಂದಣಿ ಪ್ರಮಾಣ ಪತ್ರಗಳನ್ನು ಸ್ವೀಕರಿಸಲು ನಾವು ಆಶೀರ್ವಾದವನ್ನು ಹೊಂದಿದ್ದೇವೆ. |
| ಡಿಸೆಂಬರ್ 27 : | ದೇವರ ದಯೆಯು ನಮ್ಮ ಪ್ರಾರ್ಥನಾ ಪಾಲುಗಾರರು, ನೊಂದಣಿ ಪಾಲುಗಾರರು, ನಂಬಿಕೆಯ ಪಾಲುಗಾರರು, ಜೀವನದ ಪಾಲುಗಾರರು ಮತ್ತು ದೊಡ್ಡ ಆಜ್ಞೆಯ ಪಾಲುಗಾರರು ಮತ್ತು ಅವರ ಕುಟುಂಬಗಳ ಮೇಲೆ. |
| ಡಿಸೆಂಬರ್ 28 : | ನಮ್ಮ **ಬೈಬಲ್ ಕೋರ್** ದೂರ ಶಿಕ್ಷಣ ಕೋರ್ಸ್‌ಗಳು, ಮತ್ತು ದೈವಶಾಸ್ತ್ರದ ದೂರ ಶಿಕ್ಷಣ ಕೋರ್ಸ್‌ಗಳ ಬೆಳವಣಿಗೆಗಾಗಿ. |
| ಡಿಸೆಂಬರ್ 29 : | ನಮ್ಮ ಮುದ್ರಣಾಲಯದಲ್ಲಿ ನಮ್ಮ ಪತ್ರಿಕೆಯನ್ನು 16 ಭಾಷೆಗಳಲ್ಲಿ ಮುದ್ರಿಸಲು ಮತ್ತು ಪ್ರಕಟಿಸಲು ಮತ್ತು ಅವುಗಳನ್ನು ಸೇವಾಕ್ಷೇತ್ರಗಳಿಗೆ ವಿತರಿಸಲು ನಮಗೆ ಅನುವು ಮಾಡಿಕೊಟ್ಟಿದ್ದಾನೆ. |
| ಡಿಸೆಂಬರ್ 30 : | ಇಡೀ ವರ್ಷವೆಲ್ಲಾ ನಮ್ಮ ನೆಹಮೀಯ ಸತ್ಯವೇದ ಕಾಲೇಜು ಸೂಕ್ಷ್ಮವಾಗಿ ಕಾರ್ಯನಿರ್ವಹಿಸುವಂತೆ. |
| ಡಿಸೆಂಬರ್ 31 : | 2023ರ ವರ್ಷವೆಲ್ಲಾ ಅದ್ಭುತವಾಗಿ ನಮ್ಮ ಎಲ್ಲಾ ಅಗತ್ಯತೆಗಳನ್ನು ಪೂರೈಸಿದಕ್ಕಾಗಿ. |
| ಜನವರಿ 01 : | ನಮ್ಮ ಎಲ್ಲಾ ಓದುಗರಿಗೆ ಶಾಂತಿಯನ್ನು ಕೋರುತ್ತೇವೆ ಮತ್ತು ಹೊಸವರ್ಷ 2024 ಪ್ರಪಂಚದ ಎಲ್ಲಾ ಜನರಿಗೆ. |
| ಜನವರಿ 02 : | ಎಲ್ಲಾ ಸಭೆಗಳ ಮೇಲೆ ಆತನ ಆಶೀರ್ವಾದ ಮತ್ತು ಎಲ್ಲಾ ವಿಶ್ವಾಸಿಗಳಿಗೆ ಹೊಸ ವರ್ಷದ ಒಳ್ಳೆಯ ವಾಗ್ದಾನಗಳಿಗಾಗಿ. |
| ಜನವರಿ 03 : | 2024ರಲ್ಲಿ ಎಲ್ಲಾ ಕ್ರೈಸ್ತ ಸಂಸ್ಥೆಗಳು ಮತ್ತು ಸಭೆಗಳ ಆಶೀರ್ವಾದಕ್ಕಾಗಿ. |

## ದಯಮಾಡಿ ಈ ವಿಷಯಗಳಿಗಾಗಿ ಪ್ರಾರ್ಥನೆ ಮಾಡಿರಿ!

| | |
|---|---|
| ಜನವರಿ 04 : | ಯುವಕರಲ್ಲಿ ಹಿಂಸಾಚಾರ ಮತ್ತು ಕೊಲೆಗಳ ನಿರ್ಮೂಲನೆ ಮತ್ತು ಅವರು ಪವಿತ್ರಾತ್ಮದಿಂದ ತುಂಬುವಂತೆ. |
| ಜನವರಿ 05 : | ಎಲ್ಲಾ ಕುಟುಂಬಗಳಲ್ಲಿ ಶಾಂತಿಯು ನೆಲೆಸುವಂತೆ. |
| ಜನವರಿ 06 : | ಪ್ರಪಂಚದ ನಾಯಕರು ದೈವತ್ವದ ಜ್ಞಾನದಿಂದ ತುಂಬುವಂತೆ ಮತ್ತು ಪ್ರಪಂಚದ ಎಲ್ಲಾ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುವಂತೆ. |
| ಜನವರಿ 07 : | ಪ್ರಪಂಚದ ಎಲ್ಲಾ ಜನರು ವ್ಯಯಕ್ತಿಕ ಆದಾಯವು ಹೆಚ್ಚಾಗುವಂತೆ. |
| ಜನವರಿ 08 : | ವಿಶ್ವಾದ್ಯಂತ ಎಲ್ಲಾ ಕ್ರೈಸ್ತ ಶಿಕ್ಷಣ ಸಂಸ್ಥೆಗಳ ನಿರಂತರ ಉತ್ತಮ ಸ್ಥಿತಿಗಾಗಿ. |
| ಜನವರಿ 09 : | ಎಲ್ಲಾ ಕ್ರೈಸ್ತರು ದೇವರ ವಾಕ್ಯವನ್ನು ಅನುಸರಿಸುವಂತೆ ಮತ್ತು ಕ್ರಿಸ್ತನ ಗುಣವನ್ನು ಪ್ರಕಟಿಸುವಂತೆ. |
| ಜನವರಿ 10 : | ಎಲ್ಲಾ ದೇಶಗಳ ನಡುವೆ ಶಾಂತಿ ಮತ್ತು ಆರ್ಥಿಕ ಬೆಳವಣಿಗೆಗಾಗಿ. |
| ಜನವರಿ 11 : | ಪಾ. ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬದ ಸದಸ್ಯರ 2024ರಲ್ಲಿ ದೇವರ ಬಲವುಳ್ಳ ಹಸ್ತವು ಅವರ ಮೇಲೆ ಇರುವಂತೆ. |
| ಜನವರಿ 12 : | ಎಲ್ಲಾ ಸಭೆಗಳ ಮೇಲೆ ದುಷ್ಟನ ವಿರೋಧ ದೈವತ್ವದ ಸಂರಕ್ಷಣೆಗಾಗಿ. |
| ಜನವರಿ 13 : | ಎಲ್ಲಾ ಸಭೆಗಳು ಮತ್ತು ಕ್ರೈಸ್ತ ಸಂಘ ಸಂಸ್ಥೆಗಳು ಸರ್ಕಾರದಲ್ಲಿ ಕಾನೂನು ರೀತಿಯಾಗಿ ನೋಂದಾಣಿಸುವಂತೆ. |
| ಜನವರಿ 14 : | ನಮ್ಮ ಸಂಸ್ಥೆಗೆ ಸೂಕ್ತವಾದ ಕೆಲಸಗಾರರು ಸಿಗುವಂತೆ. |
| ಜನವರಿ 15 : | ನಮ್ಮ ಸೇವೆಯ ಪಾಲುಗಾರರ ಸಫಲತೆಗಾಗಿ ಮತ್ತು ರಾಜ್ಯ ಸಂಯೋಜಕರ ಚಟುವಟಿಕೆಗಳಿಗಾಗಿ. |
| ಜನವರಿ 16 : | ನಮ್ಮ ಹಿರಿಯ ಸಭಾಪಾಲಕರ ಆತ್ಮಚರಿತ್ರೆಯ ಪುಸ್ತಕವು ಪೂರ್ಣವಾಗುವಂತೆ. |
| ಜನವರಿ 17 : | ನಮ್ಮ ಸೇವೆಯು ವಿಸ್ತರಿಸುವಂತೆ ಮತ್ತು ಪ್ರಪಂಚದಾದ್ಯಂತಹ ಸುವಾರ್ತೆಯು ಸಾರುವಂತೆ. |
| ಜನವರಿ 18 : | ಈ ತಿಂಗಳು ನಮ್ಮ ಎಲ್ಲಾ ಅಗತ್ಯತೆಗಳನ್ನು ದೇವರು ಪೂರೈಸುವಂತೆ. |

*(4ನೇ ಪುಟದಿಂದ)*

ಪ್ರೀತಿಯ ಸ್ನೇಹಿತರೇ, ನಿಮ್ಮ ಜೀವಿತದಲ್ಲಿ ಒಣಗಿದ ಕಾಲದಲ್ಲಿ ನೀವು ಹಾದುಹೋಗುತ್ತಿರಬಹುದು. ನೀವು ಇದೀಗ ಸುಂಟರಗಾಳಿಯಂತಹ ಪರಿಸ್ಥಿತಿಯನ್ನು ಅನುಭವಿಸುತ್ತಿರಬಹುದು ಆದರೆ ನಾನು ನಿಮಗೆ ಹೇಳುತ್ತೇನೆ, ನಾನು ಒಮ್ಮೆ ಅಲ್ಲ, ಎರಡು ಬಾರಿ ಅಲ್ಲ, ಆದರೆ ಅನೇಕ ಬಾರಿ ಅಲ್ಲಿಗೆ ಹೋಗಿದ್ದೇನೆ ಮತ್ತು ಯೇಸು ಯಾವಾಗಲೂ ನಿನ್ನೆ, ಇಂದು ಮತ್ತು ಎಂದೆಂದಿಗೂ ಒಂದೇ ಅಗಿರುವುದನ್ನು ನಾನು ನೋಡಿದ್ದೇನೆ.

ಆತನು ಯಾವಾಗಲೂ ನನ್ನನ್ನು ಶಾಂತಿಯಿಂದ ತುಂಬಿಸುತ್ತಾನೆ. ಈ ಹೊತ್ತು, ಶಾಂತಿಯನ್ನು ಕೊಡುವಂತೆ ದೇವರ ಹತ್ತಿರ ಕೇಳಿರಿ. ನಿಮ್ಮ ಪರಿಸ್ಥಿತಿಯ ಏನೇ ಹಾಗಿರಲಿ, ನೀವು ಹಾದು ಹೋಗುವ ಯಾವುದೇ ಸನ್ನಿವೇಶವಾಗಿರಬಹುದು. ನೀವು ಕುಳಿತಿರುವ ಹಳ್ಳ, ನೀವು ಗೊಲಾತ್ಯನನ್ನು ಎದುರಿಸುತ್ತಿರಬಹುದು, ಯೇಸು ನಿಮಗೆ ಶಾಂತಿಯನ್ನು ಕೊಡುತ್ತಾನೆ ಯಾಕೆಂದರೆ ಆತನು ಶಾಂತಿಯ ಪ್ರಭುವು ಆಗಿದ್ದಾನೆ.

ನಿಮಗೆ ಗೊತ್ತಾ ಮೊದಲನೆಯ ಕ್ರಿಸ್ತ ಜಯಂತಿಯು ನಿಜವಾಗಿ ದೊಡ್ಡದಾಗಿರಲಿಲ್ಲ ಮತ್ತು ಶಾಂತಿಯ ಸಂಭ್ರಮವಾಗಿರಲಿಲ್ಲ? ತದ್ವಿರುದ್ಧ ಕೆಲವರಿಗೆ ಯೇಸುಕ್ರಿಸ್ತನ ಜನನದ ಸುದ್ದಿಯು ಭಯವನ್ನು ತಂದಿತು. ಅವರಿಗೆ ಭಯವು ಮತ್ತು ಗಲಿಬಿಲಿ ಗೊಳಗಾದರು. ಆದಾಗ್ಯೂ, ಭಯಭೀತರಾದ ಇನ್ನೂ ನಂಬಿಗಸ್ತರು ಸುವಾರ್ತೆಯನ್ನು ಕೇಳಿದಾಗ ಮತ್ತು ನಂಬಿದಾಗ ಅವರು ಸಂತೋಷಪಡಲು ಪ್ರಾರಂಭಿಸಿದರು. ದೇವದೂತರು ಕುರುಬರಿಗೆ ಕಾಣಿಸಿಕೊಂಡಾಗ ಅವರು ಈ ರೀತಿಯಾಗಿ ಹೇಳಿದರು, **ಹೆದರಬೇಡಿರಿ, ಕೇಳಿರಿ; ಜನರಿಗೆಲ್ಲಾ ಮಹಾ ಸಂತೋಷವನ್ನುಂಟು ಮಾಡುವ ಶುಭ ಸಮಾಚಾರವನ್ನು ನಿಮಗೆ ತಿಳಿಸುತ್ತೇನೆ** (ಲೂಕ 2:10). ಅವರು ಸಾಮನ್ಯ ಜನರು ಸಾಮನ್ಯ ನಂಬಿಕೆಯುಳ್ಳವರು.

ನಮ್ಮ ಶಾಂತಿಯನ್ನು ಕದಡುವ ಇನ್ನೊಂದು ಪ್ರಮುಖ ವಿಷಯವಿದೆ : ದ್ವೇಷ ಮತ್ತು ಕ್ಷಮಿಸದಿರುವಿಕೆ.

ಇದು ಒಂದು ಕವನವನ್ನು ನನಗೆ ಜ್ಞಾಪಕ ಪಡಿಸುತ್ತದೆ.

**ವಿಷವಾದ ಮರ** ವಿಲಿಯಂ ಬಾಲ್ಕೆಯವರಿಂದ

**ನಾನು ನನ್ನ ಸ್ನೇಹಿನೊಂದಿಗೆ ಕೋಪಗೊಂಡೆನು**
**ನನ್ನ ಕೋಪವನ್ನು ಹೇಳಿದೆನು,**
**ನನ್ನ ಕೋಪವನ್ನು ಕೊನೆಯವರೆಗೆ**
**ನನ್ನ ವೈರಿಗಳೊಂದಿಗೆ ಕೋಪಗೊಂಡೆನು.**
**ಇದು ಬೇಡ ಎಂದು ಹೇಳಿದೆ, ನನ್ನ ಕೋಪವು ಬೆಳೆಯಿತು.**
**ಮತ್ತು ನಾನು ಭಯದಿಂದ ಅದಕ್ಕೆ ನೀರನ್ನು ಹಾಕಿದೆನು,**
**ಹಗಲಿರಳು ನನ್ನ ಕಣ್ಣೀರಿನಿಂದ**
**ನಾನು ಅದನ್ನು ಸೂರ್ಯನಿಂದ ನಗುಗೊಳಿಸಿದೆ**
**ಮತ್ತು ಮೋಸದ ಕುತಂತ್ರ ಗಳೊಂದಿಗೆ,**
**ಅದು ಹಗಲಿರಳು ಬೆಳೆಯಿತು.**
**ಪ್ರಕಾಶವಾದ ಸೇಬು ಬರುವವರಿಗೆ**
**ಮತ್ತು ನನ್ನ ವೈರಿಯು ಅದು ಹೊಳೆಯುವುದನ್ನು ನೋಡಿದೆ**
**ಮತ್ತು ಅವನಿಗೆ ಗೊತ್ತಿತ್ತು ಅದು ನನ್ನದು ಎಂದು**
**ಮತ್ತು ನನ್ನ ತೋಟದ ಕೊನೆಗೆ**
**ರಾತ್ರಿ ಕಂಬಕ್ಕೆ ಮುಸುಕು ಹಾಕಿದಾಗ**
**ಬೆಳಿಗ್ಗೆ ನಾನು ಸಂತೋಷದಿಂದ ನೋಡುತ್ತೇನೆ**
**ನನ್ನ ವೈರಿ ಮರದ ಕೆಳಗೆ ಚಾಚಿದ**

ಇದು ಎಲ್ಲಾ ಸಮಯಗಳಲ್ಲಿ ನನ್ನ ಅತ್ಯುತ್ತಮವಾದ ಕವನವಾಗಿದೆ.

ಬನ್ನಿ ನಾವು ಕ್ಷಮಿಸಿ ಮತ್ತು ಮುಂದೆ ಸಾಗೋಣ. ಆಗತಾನೆ ನಾವು ಶಾಂತಿಯನ್ನು ಕಂಡುಕೊಳ್ಳುವದಕ್ಕೆ ಸಾಧ್ಯ. ನಾವು ನಮ್ಮ ಹೃದಯದಲ್ಲಿ ಕ್ಷಮಿಸ ಲಾಗದನ್ನು ಇಟ್ಟುಕೊಂಡರೆ, ಶಾಂತಿಯು ನಮ್ಮನ್ನು ಬಿಟ್ಟು ಹೋಗುತ್ತದೆ. ಹೌದು, ಜನರು ನಮ್ಮನ್ನು ತಪ್ಪಾಗಿ ಅರ್ಥಮಾಡಿ ಕೊಂಡಿದ್ದಾರೆ. ಆಳವಾದ ಗಾಯಗಳಿಗೆ ಕಾರಣವಾಯಿತು. ನೋವುಂಟು ಮಾಡಿದೆ. ನಮ್ಮ ಬೆನ್ನಿಗೆ ಚೂರಿ ಹಾಕಿದರು. ದೇವರು ಅದನ್ನು ನಿಭಾಯಿಸಲಿ.

ಬಹುಶಃ ನೀವೂ ಇನ್ನೂ ನಿಮ್ಮ ಜೀವನದಲ್ಲಿ ಯಾರನ್ನಾದರೂ ಕ್ಷಮಿಸಿಲ್ಲವೇ. ಈಗ ಸಮಯವಾಗಿದೆ, ಒಂದು ಸಂದೇಶ ಅಥವಾ ಒಂದು ದೂರವಾಣಿಯ ಕರೆಯ ಮೂಲಕ ಮರು ಸಂಧಾನ ಮಾಡಿಕೊಳ್ಳಿರಿ. ಇದನ್ನು ಮಾಡುವದಕ್ಕೆ ದೇವರು ನಿಮಗೆ ಶಾಂತಿಯನ್ನು ಕೊಡಲಿ.

## 3. ಆತನ ಪ್ರಸನ್ನತೆಯ ಉಡುಗೊರೆ!

ದೇವರಿಂದ ಮೂರನೇಯ ಉಡುಗೊರೆ ಆತನ ಪ್ರಸನ್ನತೆ! ಓಹೋ! ಎಂತಹ ಅದ್ಭುತವಾದ ಉಡುಗೊರೆ! ಆತನ ಹೆಸರು ಇಮ್ಮಾನುವೇಲ್ ಅರ್ಥ, ದೇವರು ನಮ್ಮ ಸಂಗಡ ಇದ್ದಾನೆ. ಆತನು ನಮ್ಮನ್ನು ಎಂದಿಗೂ ಕೈಬಿಡುವುದಿಲ್ಲ ಮತ್ತು ತೊರೆಯುವುದಿಲ್ಲ ಎಂದು ನಮಗೆ ವಾಗ್ದಾನವನ್ನು ಮಾಡಿದ್ದಾನೆ. **ಆತನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ** (ಕೀರ್ತನೆ 16:11). ದಾವಿದನಿಗೆ ತನ್ನ ಜೀವಿತದಲ್ಲಿ ಎಲ್ಲವೂ ಇತ್ತು ಹಣ, ಹೆಸರು, ಆಸ್ತಿ, ಅಧಿಕಾರ, ಜಯ, ಆದರೂ ಎಲ್ಲಕ್ಕಿಂತ ಹೆಚ್ಚಾಗಿ ಆತನು ಹಂಬಲಿಸಿದ ಒಂದು ವಿಷಯ-ಕರ್ತನ ಸನ್ನಿಧಿಯಲ್ಲಿ ಇರಬೇಕೆಂದು. ಆತನ ಅರಮನೆಗಿಂತ. ದಾವಿದನು ಪಾಪಮಾಡಿದಾಗ, ತನ್ನ ಪ್ರತಿಷ್ಠೆಯ ಬಗ್ಗೆ ಚಿಂತೆ ಮಾಡಲಿಲ್ಲ. ಆತನು ಪರಿಶುದ್ಧಾತ್ಮನ ಪ್ರಸನ್ನತೆಯ ಬಗ್ಗೆ ಹೆಚ್ಚು ಕಾಳಜಿ ವಹಿಸಿದ್ದನು. ಆತನು ಈ ರೀತಿಯಾಗಿ ಹೇಳುತ್ತಾನೆ, **ನಿನ್ನ ಸನ್ನಿಧಿಯಿಂದ ನನ್ನನ್ನು ತಳ್ಳಬೇಡ; ನಿನ್ನ ಪರಿಶುದ್ಧಾತ್ಮವನ್ನು ನನ್ನಿಂದ ತೆಗೆಯಬೇಡ** (ಕೀರ್ತನೆ 51:11).

*(8ನೇ ಪುಟಕ್ಕೆ)*

**NEHEMIAH BIBLE**
**EVENING COLLEGE**
Chepauk & Santhoshapuram, Chennai.
Medium :Tamil
*Registered Candidate for Membership*
Asia Theological Association (ATA)
Recognised by International Christian Leaders &
Senior Pastors for the past 54 years
Certificate in Ministry
Diploma in Theology
Qualification : 10th Standard & above
Rush for Admission!
Contact : The Chairman, Nehemiah Bible College.
10, MOHAMMED ABDULLAH 2ND STREET, BELLS ROAD, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

## PLEASE PRAY FOR OUR MINISTRIES AT THE HEAD QUARTERS

1. Prayer Service : 24 hours
2. **BIBLECOR -** Bible Correspondence Courses : English, Tamil & Hindi
3. **ECHO OF HIS CALL** - Monthly Magazines : English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikan.
4. Nehemiah Bible Colleges (Three Centres) (Evening / Residential)
5. Theological Correspondence Courses: English & Tamil
6. Great Commission Partners (Network of Pastors)
7. Training Programmes
8. Crusades
9. Literature Distribution and Follow Up
10. Gospel Printing Press - Publications
11. St. Paul's Matriculation School - Village English High School
12. Sunday Schools : 8.30 a.m. & 4.00 p.m. Sunday
13. **Tamil Services : 8.00 a.m. & 10.00 a.m. Sunday**
14. **Hindi Service : 4.00 p.m. Sunday**
15. **Telugu Service : 5.00 p.m. Sunday**
16. **English & Tamil Service : 6.00 p.m. Sunday**
17. Women's Prayer : 5.30 p.m. Wednesday
18. Men's Prayer : 7.00 p.m. Friday
19. Discipleship Meeting : 6.00 p.m. Saturday
20. House Meetings : 6.30 p.m. Tuesday & Thursday
21. Special Holy Communion : 6.00 a.m. 1st day of each month
22. Ministers Review Meeting : 5.30 p.m. First Saturday
23. Parents' Prayer : 4.00 p.m. First Sunday
24. Night Prayer : 9.30 p.m. Second Friday
25. Fasting Prayer : 9:30 a.m. Third Saturday
26. Holy Communion : Second Sunday Services
27. Youth / Kid Prayer : 10.00 p.m. daily
28. Staff Devotion : 9.00 a.m. daily
29. Office : 9.00 a.m. to 9.00 p.m. (except Sundays)

## Echo of His Call Postal Courses for candidates in India only

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a course book entitled **New Life – For You!** **After the completion of this course, you will get a certificate. There will be no compulsory fees. You will be blessed!**

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**
**Echo of His Call, Post Box 2957**
CHEPAUK, CHENNAI - 600 005.
**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರೇ ಅರ್ಥವಾಗಲಿ" (ಮತ್ತಾಯ 24:15)

## ಕರ್ತನು ಕೇಳಿ ವಿಮೋಚಿಸುತ್ತಾನೆ!

**ಯೆಹೋವನು ನೀತಿವಂತರ ಕೂಗನ್ನು ಕೇಳಿ ಎಲ್ಲಾ ಕಷ್ಟಗಳಿಂದ ಅವರನ್ನು ಬಿಡಿಸುತ್ತಾನೆ. ಕೀರ್ತನೆ 34:17.**

ನಾನು ಸೇವಕನಾದ ಪ್ರಾರಂಭದ ದಿನಗಳಲ್ಲಿ, ನನ್ನ ಕಡಿಮೆ ಆದಾಯದ ನಿಮಿತ್ತ ನಾನು ಸರಳ ಜೀವನವನ್ನು ಜೀವಿಸಬೇಕಾಗಿತ್ತು. ಒಂದು ದಿನ ಬೆಳಿಗ್ಗೆ, ನನ್ನ ದಿವಂಗತ ಪಾಸ್ಟರ್ ಮುಖ್ಯ ಪಾಸ್ಟರ್‌ಆದ ಪಾ. ಜಿ. ಸುಂದರಂರವರು ಬರುವ ಭಾನುವಾರ ಚೆನ್ನೈನ ಪೆರಿಯಾರ್ ತಿದಲ್ ಹಾಲ್ ನಲ್ಲಿ ವಿಶೇಷವಾದ ಕೂಟವಿದೆ ಎಂದು ಪ್ರಕಟಿಸಿದರು. ಆ ಒಂದು ಸಮಯದಲ್ಲಿ, ಸಭೆಯಲ್ಲಿ ಶೂ ಸ್ಟಾಂಡ್‌ನ ಜವಾಬ್ದಾರಿ ಹುಡಗಿನ ಸೇವೆಯನ್ನು ನಾನು ವಹಿಸಿಕೊಂಡಿದ್ದೆನು. ಆದ್ದರಿಂದ, ನನ್ನ ಉತ್ತಮವಾದ ಬಟ್ಟೆಗಳನ್ನು ಸ್ವಚ್ಛಮಾಡಿ ಇಟ್ಟುಕೊಂಡಿದ್ದೆನು. ಭಾನುವಾರ ಉಟ್ಟು ಕೊಳ್ಳುವದಕ್ಕೆ ತಯಾರು ಮಾಡಿ ಕೊಂಡಿದ್ದೆನು.

ಹಿಂದಿನ ಶುಕ್ರವಾರ, ಒಬ್ಬ ಯೌವ್ವನಸ್ಥ ಪುರುಷನು ನನ್ನನ್ನು ಭೇಟಿಯಾಗಿ ನನ್ನ ಗೆಳೆಯರ ಸಹೋದರನೆಂದು ತನ್ನನ್ನು ಪರಿಚಯ ಮಾಡಿ ಕೊಂಡನು. ನನ್ನ ಜೊತೆಗೆ ಎರಡು ದಿವಸ ತಂಗುವದಕ್ಕೆ ಆತನು ನನ್ನನು ವಿನಂತಿ ಮಾಡಿಕೊಂಡನು. ನಾನು ಸಂತೋಷವಾಗಿ ನನ್ನ ಜೊತೆಗೆ ತಂಗುವದಕ್ಕೆ ಒಪ್ಪಿಕೊಂಡೆನು.ನನ್ನ ಹಳೆಯ ಸ್ನೇಹಿತನ ಸಹೋದರನಿಗೆ ಸಹಾಯ ಮಾಡುವದಕ್ಕೆ ನನಗೆ ಬಹಳ ಸಂತೋಷವಾಯಿತು.

ಏನೇ ಹಾಗಲಿ, ನನಗೆ ಆಶ್ಚರ್ಯವಾಗುವಂತೆ ಮರುದಿನ (ಶನಿವಾರ) ನಾನು ಮನೆಯಿಂದ ಹೊರಗಿರುವಾಗ, ನಾನು ಭಾನುವಾರದ ಆರಾಧನೆಗೆ ಮೀಸಲಿಟ್ಟದ್ದ ಸೆಟ್ ಸೇರಿದಂತೆ ನನ್ನ ಹಳೆಯ ಮತ್ತು ಹೊಸ ಬಟ್ಟೆಗಳನ್ನು ನನ್ನ ಇತರ ಬೆಲೆಬಾಳುವ ವಸ್ತುಗಳನ್ನು ಸಂಗ್ರಹಿಸಿ ಓಡಿಹೋದನು. ನನ್ನ ಎಲ್ಲಾ ಬಟ್ಟೆಗಳನ್ನು ಮತ್ತು ಪ್ರಾಮುಖ್ಯವಾದ ವಸ್ತುಗಳನ್ನು ಕಳೆದುಕೊಂಡೆನು.

ಭಾನುವಾರದಂದು ಮತ್ತೊಂದು ಬಟ್ಟೆಯನ್ನು ಖರೀದಿಸಲು ನನ್ನ ಬಳಿ ಹಣವಿಲ್ಲದ ಕಾರಣ ನನ್ನ ಪರಿಸ್ಥಿತಿಯ ಬಗ್ಗೆ ನನಗೆ ತುಂಬಾ ವಿಷಾದ ವಾಯಿತು. ಶು ಸ್ವಾಡ್ ಜವಾಬ್ದಾರಿಯ ಸೇವೆಯನ್ನು ಹೊತ್ತುಕೊಂಡಿರುವ ನಾನು ಹೊಲಸು ಬಟ್ಟೆಗಳನ್ನು ಹಾಕಿಕೊಂಡು ನಿಂತುಕೊಳ್ಳುವದು ಸ್ವೀಕರಾರ್ಹವಲ್ಲ. ನನ್ನ ಪಾಸ್ಟರ್‌ರವರು ವಸ್ತ್ರದ ವಿಷಯದಲ್ಲಿ ಬಹಳ ಕಟ್ಟುನಿಟ್ಟಾಗಿದ್ದರು. ನಾನು ಬಹಳ ನಿರಾಶೆಯಾಗಿ ದೇವರ ಕಡೆಗೆ ನನ್ನ ಗಮನವನ್ನು ತಿರುಗಿಸಿದೆನು. ಹೊಸ ಬಟ್ಟೆಗಳನ್ನು ಖರೀದಿಸಲು ಕೆಲವು ಆರ್ಥಿಕ ಸಹಾಯಕ್ಕಾಗಿ ಆಶಿಸಿದೆನು. ನನ್ನ ನಂಬಿಕೆಯು ಅಲುಗಾಡಿದ್ಯಾಗೂ, ಆದರೆ ಶನಿವಾರ ಮಧ್ಯಾಹ್ನದ ಆ ಕಷ್ಟಕರ ಪರಿಸ್ಥಿತಿಯಲ್ಲಿ ಅದ್ಭುತಕ್ಕಾಗಿ ದೇವರನ್ನು ನಂಬಲು ನನಗೆ ಬೇರೆ ಯಾವುದೇ ಆಯ್ಕೆ ಇರಲಿಲ್ಲ.

ತಕ್ಷಣ, ನನ್ನ ಮನೆಯ ಹೊರಗಡೆಯಿಂದ ಯಾರು ನನ್ನನ್ನು ಕರೆದರು. ನಾನು ಹೊರಗಡೆ ಹೋಗಿ ಅವರನ್ನು ಒಳಗಡೆ ಆಹ್ವಾನಿಸಿದೆನು. ಆತನು ಕೆಲವು ಬಿಳಿಬಟ್ಟೆಗಳನ್ನು ತುಂಬಿದ ಚೀಲವನ್ನು ಹೊತ್ತೊಯ್ಯುತ್ತಿದ್ದನು. ಅವುಗಳನ್ನು ನನಗೆ ಕೊಟ್ಟು ಆತನು ನನಗೆ ಈ ರೀತಿಯಾಗಿ ಹೇಳಿದನು. ಪ್ರೀತಿಯ ಸಹೋದರ ಸ್ಯಾಮ್, ಆರು ತಿಂಗಳ ಹಿಂದೆ, ನನ್ನ ಸಂಬಂಧಿಕರು ವಿದೇಶದಿಂದ ಅನೇಕ ಬಿಳಿ ಅಂಗಿ ಮತ್ತು ಪ್ಯಾಂಟ್ ಬಟ್ಟೆಗಳ ಸೆಟ್ಟನ್ನು ತೆಗೆದುಕೊಂಡು ಬಂದಿದ್ದರು. ಅವುಗಳು ನನ್ನ ದೇಹಕ್ಕೆ ಸರಿಯಾಗದೆ ಕಾರಣ, ನಾನು ಅವುಗಳನ್ನು ನಿಮಗೆ ನೀಡಲು ಯೋಚಿಸುತ್ತಿದ್ದೇನೆ, ಯಾಕೆಂದರೆ ಅವು ನಿಮಗೆ ಸಂಪೂರ್ಣವಾಗಿ ಹೊಂದಿ ಕೊಳ್ಳುತ್ತೇವೆ. ಎಲ್ಲಾ ಬಟ್ಟೆಗಳು ಐಷಾರಾಮಿ ವಿದೇಶಿ ವಸ್ತುಗಳಿಂದ ಮಾಡಲ್ಪಟ್ಟಿದ್ದರಿಂದ ಮತ್ತು ನನ್ನ ನಿಖರವಾದ ಅಳತೆಗಳಿಗೆ ಅನುಗುಣವಾಗಿ ನಾನು ಕೃತಜ್ಞತೆ ಮತ್ತು ಸಂತೋಷದಿಂದ ತುಂಬಿದೆ.

ಮರುದಿನ ಆ ಒಂದು ಸೆಟ್ ವಸ್ತ್ರಗಳನ್ನು ಹಾಕಿಕೊಂಡು ಸಭೆಗೆ ಹೋದೆನು. ಪಾಸ್ಟರ್ ಜಿ. ಸುಂದರಂ ನಮ್ಮ ಮುಖ್ಯ ಸಭಾಪಾಲಕರು, ನನ್ನನ್ನು ಮೇಲಿನಿಂದ ಕೆಳಗಡೆ ನೋಡಿದರು. ಸಹೋದರ ಸ್ಯಾಮ್, ನೀವು ಈ ಹೊತ್ತು ನಿಷ್ಪಾಪವಾಗಿ ಬಟ್ಟೆಯನ್ನು ಧರಿಸುವಿರಿ ಎಂದು ಹೇಳಿದರು. ನಾನು ನಡೆದ ವಿಷಯವನ್ನು ಸಂಕ್ಷಿಪ್ತವಾಗಿ ಅವರಿಗೆ ವಿವರಿಸಿ ದೇವರು ನನಗೆ ಹೇಗೆ ಆಶೀರ್ವದಿಸಿದನು ಎಂದು ಹೇಳಿದೆನು. ಆತನಿಗೆ ಕೂಡ ಬಹಳ ಸಂತೋಷವಾಗಿ ಮತ್ತು ಭರವಸೆಯ ಬೆನ್ನು ತಟ್ಟುವಿಕೆಯನ್ನು ನನಗೆ ಕೊಟ್ಟನು. ತನ್ನ ಸಾಂಪ್ರದಾಯಿಕ ದೈವಿಕ ರೀತಿಯಲ್ಲಿ ನಗು. ಕರ್ತನಿಗೆ ಸ್ತೋತ್ರವಾಗಲಿ.

ಕೀರ್ತನೆ 34:19 ಹೇಳಿದ ಹಾಗೆ, **ನೀತಿವಂತನಿಗೆ ಸಂಭವಿಸುವ ಕಷ್ಟಗಳು ಅನೇಕವಿದ್ದರೂ ಯೆಹೋವನು ಅವೆಲ್ಲವುಗಳಿಂದ ಅವನನ್ನು ಬಿಡಿಸುತ್ತಾನೆ.**

★ ★ ★

---

*(6ನೇ ಪುಟದಿಂದ)*

ಯೇಸು ಮನೆಗೆ ಹೋದಾಗ, ಹೀಗೆ ಹೇಳಿದನು, **ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು.** (ಯೋಹಾನ 14:16). ಈ ಹೊತ್ತು ನಾವು ನಮ್ಮನ್ನು ಕೇಳಿಕೊಳ್ಳೋಣ, ನಮ್ಮ ಜೀವಿತದಲ್ಲಿ, ಕುಟುಂಬಗಳಲ್ಲಿ, ಮನೆಗಳಲ್ಲಿ, ನಮ್ಮ ಗಂಡ ಹೆಂಡರ ಸಂಬಂಧದಲ್ಲಿ ದೇವರ ಪ್ರಸನ್ನತೆಯ ಉಡುಗೊರೆಯು ಇದೆಯಾ? ನಾವು ದೇವರ ಪ್ರಸನ್ನತೆಗೆ ಪ್ರಾಮುಖ್ಯತೆಯನ್ನು ಕೊಡುತ್ತೇವೆಯಾ ಅಥವಾ ಈ ಲೋಕದ ಪ್ರಸನ್ನತೆ? ಈ ಕ್ರಿಸ್ತಜಯಂತಿಯ ಸಮಯದಲ್ಲಿ ನಮ್ಮನ್ನು ನಾವು ಈ ಪ್ರಶ್ನೆಯನ್ನು ಮಾಡಿಕೊಳ್ಳಬೇಕಾಗಿದೆ.

### 4. ದೇವರ ಶಕ್ತಿಯ ಉಡುಗೊರೆ!

ರಾಜಕುಮಾರನ ಮತ್ತೊಂದು ಅಲೌಕಿಕ ಉಡುಗೊರೆ ನಮ್ಮ ಜೀವನದಲ್ಲಿ ಆತನ ಅದ್ಭುತ ಮತ್ತು ಶಕ್ತಿಯುತವಾಗಿದೆ. ಆದಿಕಾಂಡ 3:15ರಲ್ಲಿ ಮಾಡಿದ ವಾಗ್ದನವು ಯೇಸುವಿನಲ್ಲಿ ನೆರವೇರಿದೆ. ಇದು ರಕ್ಷಕನ ಮೊದಲ ವಾಗ್ದಾನವಾಗಿದೆ. ಆ ವಚನವು ಈ ರೀತಿಯಾಗಿ ಹೇಳುತ್ತದೆ, **ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ.** ಆದಿಕಾಂಡ 3:15.

ಈ ವಚನವು ಸೈತಾನನಿಗೆ ಮತ್ತು ಮಾನವ ಕುಲಕ್ಕೆ ಶಾಶ್ವತವಾದ ವೈರತ್ವವನ್ನು ಸ್ಥಾಪಿಸುತ್ತದೆ. ಏನೇ ಹಾಗಲಿ, ಯೇಸುವಿನ ಜನನವು ಸೈತಾನನು ಹಿಡಿದುಕೊಂಡಿದ್ದಾ ಎಲ್ಲಾ ಶಕ್ತಿಯನ್ನು ಚದುರಿಸಿದನು. ಸೈತಾನನು ದೇವರ ಯೋಜನೆಯನ್ನು ಬದಲಾವಣೆ ಮಾಡುವದಕ್ಕೆ ಪ್ರಯತ್ನಿಸಿದನು. ಯೇಸುವಿನ ಜನನದ ಸಮಯದಲ್ಲಿ ಶಿಶುಗಳನ್ನು ಕೊಲ್ಲುವ ಮೂಲಕ ಪರಲೋಕದ ಉದ್ದೇಶವನ್ನು ನಾಶಮಾಡಲು ಪ್ರಯತ್ನಿಸಿದನು. ಆದಾಗ್ಯೂ, ಸೈತಾನನ ಯೋಜನೆಯು ನಿರರ್ಥಕ ವಾಯಿತು. ದೇವರ ಉದ್ದೇಶವನ್ನು ನಾಶ ಮಾಡುವದಕ್ಕೆ ಆಗುವುದಿಲ್ಲ. ಪ್ರೀತಿಯ ಮಕ್ಕಳೆ, ನಿನಗಾಗಿ ಮತ್ತು ನನಗಾಗಿ ಇರುವ ದೇವರ ಯೋಜನೆಯನ್ನು ಯಾರು ನಾಶಮಾಡುವದಕ್ಕೆ ಸಾಧ್ಯವಿಲ್ಲ. ನಿಮ್ಮ ಈಗಿನ ವರ್ತಮಾನದ ಪರಿಸ್ಥಿತಿಯು ಒಳ್ಳೇಯದಾಗದೆ ಇರಬಹುದು, ಯೇಶಾಯನು ನೋಡದನ್ನು ಜ್ಞಾಪಕಮಾಡಿಕೊಳ್ಳಿರಿ. ಕರ್ತನು ಉನ್ನತೋನ್ನತ ಸಿಂಹಾಸನಾರೂಢ ನಾಗಿರುವನು. (ಯೆಶಾಯ 6:1). ನಮ್ಮ ಕರ್ತನು ಆಳುವನು! ಅಂತಿಮ ಅಧಿಕಾರವು ನಮ್ಮ ಕರ್ತನಲ್ಲಿ ಇದೆ. ದೇವರು ನಮ್ಮ ಹೆಜ್ಜೆಗಳನ್ನು ನಡೆಸುವನು ಮತ್ತು ಸಮುದ್ರದ ಅಲೆಗಳ ಮಿತಿಯನ್ನು ಮಿತಿಗೊಳಿಸುವನು. ಅವುಗಳು ಮುಂದೆ ಹೋಗ ದಂತೆ ಅಜ್ಞಾಪಿಸುತ್ತಾನೆ. ದೇವರು ಘೋಷಿಸುತ್ತಾನೆ, ನನ್ನ ಉದ್ದೇಶವು ನಿಲ್ಲುತ್ತದೆ! ನಮ್ಮ ದೇವರು ದೊಡ್ಡವನು ಮತ್ತು ಶಕ್ತಿಯಲ್ಲಿ ಅದ್ಭುತನಾಗಿದ್ದಾನೆ!

ನಾವು ವಿಜೇತರಾಗಲು ಮತ್ತು ನಿಮ್ಮ ಪರಿಸ್ಥಿತಿಗಳು, ವೈಫಲ್ಯಗಳು, ಸೋಲುಗಳು, ಪಾಪಗಳು, ಶಾಪಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸೈತಾನನ್ನು ಜಯಿಸಲು ಆತನು ಬಯಸುತ್ತಾನೆ. ಬಿಟ್ಟು ಕೊಡಬೇಡಿರಿ! ಕ್ರಿಸ್ತಜಯಂತಿಯ ಆರಾಧನೆಯು ನಾವು ವಿಜಯ ಶಾಲಿಗಳಾಗಿದ್ದೇವೆ ಎಂದು ನಮಗೆ ಜ್ಞಾಪಕ ಪಡಿಸುತ್ತದೆ. ಎಲಿಜೆಬತಳು ಬಂಜೆತನ ವನ್ನು ಜಯಿಸಿದಳು. ಮರಿಯಳು ಸಾಮಾಜಿಕ ತಾರತಮ್ಯವನ್ನು ಜಯಿಸಿದಳು. ಮಾನವಕುಲವು ಪಾಪ ಮತ್ತು ಸೈತಾನನ್ನು ಜಯಿಸಿತು. ನೀವು ಯಾವುದಕ್ಕಾಗಿ ಕಾಯುತ್ತಾ ಇದ್ದೀರೀ? ಜ್ಞಾಪಕ ಮಾಡಿಕೊಳ್ಳಿರಿ, ನಾವು ಜಯಶಾಲಿಗಳು ಆಗಿದ್ದೇವೆ.

## 5. ಕ್ಷಾಮಪಣೆಯ ಉಡುಗೊರೆ!

ಕೊನೆಯದಾಗಿ, ದೇವರು ಈ ಲೋಕವನ್ನು ಸೃಷ್ಟಿ ಮಾಡಿದಾಗ, ಅದು ಒಳ್ಳೆಯದಾಗಿ, ಸುಂದರವಾಗಿ, ಮತ್ತು ಪರಿಪೂರ್ಣವಾಗಿದೆ ಎಂದು ನೋಡಿದನು, ಏನೇ ಹಾಗಲಿ, ಅವಿಧೇಯತೆಯ ಮೂಲಕ ಪಾಪವು ಪ್ರವೇಶವಾದಗ, ಎಲ್ಲವೂ ಬದಲಾವಣೆ ಯಾಯಿತು.

ಅದು ಪಾಪವನ್ನು ತೆಗೆದುಕೊಂಡು ಬಂದಿತು, ಮತ್ತು ಮಾನವ ಕುಲವು ಪಾಪವನ್ನು ಜಯಿಸುವದಕ್ಕೆ ಹರಸಾಹಸಪಡುತ್ತಿದೆ ಮತ್ತು ಅದರ ಪರಿಣಾಮಗಳು. ಈ ಒಂದು ವಿಷಯವು ಎಲ್ಲಾ ಧರ್ಮಗಳಲ್ಲಿ ಪ್ರಸ್ತುತವಾಗಿದೆ. ಸತ್ಯವೇದವು ಈ ರೀತಿಯಾಗಿ



*Forgiveness of Jesus Christ*

ಹೇಳುತ್ತದೆ, **ಪಾಪವು ಕೊಡುವ ಸಂಬಳ ಮರಣ** ಎಂಬುದಾಗಿದೆ. ರೋಮ 6:23. ಇನ್ನೊಂದು ಮಾತಿನಲ್ಲಿ ಹೇಳುವದಾದರೆ, ನಮ್ಮ ಪಾಪದ ಕ್ರಿಯೆಗಳ ಪರಿಣಾಮವು ಕೇವಲ ಶಾರೀರಕ ಮರಣವಲ್ಲ ಆದರೆ ಆತ್ಮೀಕ ಮರಣವಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸಿದೆ. ದೊಡ್ಡ ಕಂದಕವನ್ನು ನಮ್ಮ ನಡುವೆ ಸೃಷ್ಟಿಮಾಡಿದೆ. ಏನೇ ಹಾಗಲಿ, ಯೇಸುಕ್ರಿಸ್ತನ ಜನನವು ಈ ಬೇರ್ಪಡಿಸುವಿಕೆಯ ಅಂತ್ಯದ ಗುರುತು ಅಗಿದೆ. ಯೇಸು ಈ ಲೋಕಕ್ಕೆ ಬಂದಾಗ, ನಮ್ಮ ಪಾಪಗಳಿಗಾಗಿ ಸಾಯುವದಕ್ಕೆ ಬಂದನು. ನಮ್ಮ ದಂಡನೆಯನ್ನು ಆತನು ತೆಗೆದುಕೊಂಡನು. ಶಿಲುಬೆ ಯಲ್ಲಿ ಸಾಯುವದರ ಮೂಲಕ ಯೇಸು ನಮಗೆ ಕೃಪೆ ಎಂಬ ವಿಶೇಷವಾದ ಉಡುಗೊರೆಯನ್ನು ಒದಗಿಸಿದ್ದಾನೆ. ಕ್ರಿಸ್ತಜಯಂತಿ ಸಮಯವು ನಿಷ್ಕಂಳಕ, ಸ್ವಾರ್ಥರಹಿತ ದೇವರ ಪ್ರೀತಿಯನ್ನು ಜ್ಞಾಪಕಪಡಿಸಿಕೊಳ್ಳುವದಾಗಿದೆ. ಇದು ಕೃಪೆಯ ಮೂಲಕವಾಗಿ ನಮಗೆ ಬಂದಿದೆ. ಇದರ ಜೊತೆಗೆ, ಯೇಸು ನಿರಂತರವಾಗಿ ನಮಗಾಗಿ ವಿಜ್ಞಾಪಿಸು ತ್ತಾನೆ, ರೋಮಾ 8:34 ಉಲ್ಲೇಖಿಸಿದೆ. ಕೃಪೆಯು ಮುಚ್ಚಲಾಗದಷ್ಟು ದೊಡ್ಡ ಪಾಪವಿಲ್ಲ ಮತ್ತು ಕೃಪೆಯು ಸರಿದೂಗಿಸಲು ಸಾಧ್ಯವಾಗದ ಸಣ್ಣ ಪಾಪವಿಲ್ಲ ಎಂದು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ.

ಪ್ರೀತಿಯ ಸ್ನೇಹಿತರೇ, ಈ ಲೋಕದ ಒತ್ತಡವು, ನಮ್ಮ ಅನುದಿನದ ಬೇಡಿಕೆಗಳು, ನಾವು ಎದುರಿಸು ವಂತಹ ಸವಾಲುಗಳು ನಮ್ಮನ್ನು ದೇವರಿಂದ ದೂರವಿಡುತ್ತವೆ. ಒಂದು ವೇಳೆ ನೀವು ದೇವರಿಂದ ದೂರವಾಗಿದ್ದರೆ, ಮತ್ತೆ ಆತನ ಬಳಿಗೆ ಬರುವ ಸಮಯವು ಇದಾಗಿದೆ. ಯೇಸುವು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಕ್ಷಮಿಸಲು ಇಚ್ಚೆವುಳ್ಳವ ನಾಗಿದ್ದಾನೆ. ಆತನೊಂದಿಗೆ ನಾವು ವ್ಯಯಕ್ತಿಕ ಸಂಬಂಧವನ್ನು ಇಟ್ಟು ಕೊಳ್ಳಬೇಕೆಂದು ಆತನು ಬಯಸುತ್ತಾನೆ.

ಪ್ರೀತಿಯ ಸ್ನೇಹಿತರೇ, ಈ ಕ್ರಿಸ್ತ ಜಯಂತಿಯು ನಿಮಗೆ ಅರ್ಥಗಭಿತವಾಗಿರಲಿ ಎಂದು ನಮ್ಮ ಪ್ರಾರ್ಥನೆಯಾಗಿದೆ. ರಾಜಕುಮಾರನ ಐದು ಉಡುಗೊರೆಗಳಲ್ಲಿ ಸಂತೋಷಿಸಿರಿ. ಆತನು ವಾಗ್ದಾನವನ್ನು ನೆರವೇರಿಸುವನು ಎಂದು ನೀವು ಯಾವಾಗಲೂ ಜ್ಞಾಪಕವಿಟ್ಟುಕೊಳ್ಳಬೇಕೆಂದು ನಾನು ನಿಮಗಾಗಿ ಪ್ರಾರ್ಥಿಸುತ್ತೇನೆ. ಇದು ತೆಗೆದುಕೊಳ್ಳುವ ಸಮಯವನ್ನು ಲೆಕ್ಕಿಸದೆ. ಆತನು ಶಾಂತಿಯನ್ನು ಕೊಡುವವನಾಗಿದ್ದಾನೆ. ಸಮಸ್ಯೆಗಳ ಮಧ್ಯದಲ್ಲಿ ಕೂಡ, ಆತನ ಪ್ರಸನ್ನತೆಯು ಯಾವಾಗಲೂ ನಮ್ಮ ಸಂಗಡ ಇರುವಂತಹದ್ದಾಗಿದೆ. ನಾವು ನೋಡದೆ ಅಥವಾ ಅನುಭವಪಡದೆ ಇದ್ದಾಗ್ಯೂ, ಆತನು ನಮ್ಮ ಕೊನೆಯ ಉಸಿರುವವರೆಗೆ ನಮ್ಮ ಸಂಗಡ ಇರುವವನು. ಆತನು ಶಕ್ತಿಯುಳ್ಳ ದೇವರು ಆಗಿದ್ದಾನೆ. ನಾವು ಭಯಪಡುವ ಅವಶ್ಯಕತೆ ಇಲ್ಲ. ಆತನು ನಮ್ಮನ್ನು ಕೇವಲ ಜಯಶಾಲಿಗಳಾಗಿ ಮಾಡುವ ದಲ್ಲದೇ ಆದರೆ ಜಯಶಾಲಿಗಳ ಹೆಚ್ಚಾಗಿ. ಅಂತಿಮ ವಾಗಿ, ಆತನು ನಮ್ಮನ್ನು ಅಂಗೈಯಲ್ಲಿ ಅಪ್ಪಿಕೊಳ್ಳು ವದಕ್ಕಾಗಿ ಕಾಯತ್ತಾ ಇದ್ದಾನೆ ಮತ್ತು ನೀವು ಹೇಗೆ ಇದ್ದಾರೆೋ ಹಾಗೆಯೆ ಅತನು ನಿಮ್ಮನ್ನು ಸ್ವೀಕರಿಸುವವನಾಗಿದ್ದಾನೆ.

ರಾಜಕುಮಾರನ ಐದು ಉಡುಗೊರೆಗಳನ್ನು ಸ್ವೀಕರಿಸಿದರೆ ನೀವು ನಿಜವಾದ ಕ್ರಿಸ್ತಜಯಂತಿ ನಿಜವಾದ ಅರ್ಥವನ್ನು ನೀವು ಅನುಭವಿಸುತ್ತೀರಿ. ನಿಮ್ಮೆಲ್ಲರಿಗೆ ದೊಡ್ಡ ಸಂತೋಷ, ಆಶೀರ್ವದಿಸಲ್ಪಟ್ಟ, ಸಂಭ್ರಮದ, ಮತ್ತು ಅರ್ಥ ಗರ್ಬಿತವಾದ ಕ್ರಿಸ್ತಜಯಂತಿಯ ಶುಭಾಶಯಗಳನ್ನು ಕೋರುತ್ತೇವೆ!

★ ★ ★


## URGENT

We require approximately 1000 Hindi Christian books for **our Nehemiah Bible Colleges**. Kindly inform us about the possibility of obtaining theological Hindi books.

- Pr. S. Sam Selva Raj, Editor
+91-98412 71858

## NEED LIBRARY BOOKS

We are in need of **Tamil,, English and Hindi books** for our Libraries at **St. Paul's Matriculation School and Nehemiah Bible Colleges.** If you have new or old books in good condition and If you have new or old books in good condition and are willing to donate, please get in touch with us.

- Pr. S. Sam Selva Raj, Editor
+91-98412 71858

RNI NO. 70107/98, Postal Regn. No. TN/CH (C)/195/21-23 WPP NO. TN/PMG(CCR)/WPP-219/21-23

## Echo of His Call

**YouTube**
Please subscribe

Kindly view and subscribe our **Echo of His Call YouTube Channel** when you get time. Thanks.

**- Editor**

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**
*****
**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

ECHO OF HIS CALL
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.com

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/21-23**
**WPP NO. TN/PMG(CCR)/WPP- 219/21-23**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 11th DECEMBER 2023**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

## *JESUS LOVES YOU!*

To

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**